RNI: KARKAN\2019\78042



ಸಂಪಾದಕರು : ಸಿ.ಎನ್.ಸಮಗಂಡಿ.

# ಸತ್ಯಮಿಥ್ಯ

ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ

Satyamithi Kannada Daily Morning

ಚನ್ನು ಮೆನ್ಸ್‌ವೇರ್
ಕೊಳ್ಳಿಯವರ ಕ್ರಾಸ್.
ಚನ್ನು ಸ್ಟಿಚ್‌ವರ್ಲ್ಡ್
ಬಿ.ಎಸ್.ಎನ್.ಎಲ್. ಆಫೀಸ್ ಹತ್ತಿರ,
ಜೇಂಟ್ಸ್ ಸ್ಪೆಶಲಿಸ್ಟ ಟೇಲರ್
ಗಜೇಂದ್ರಗಡ-582114.
ಸೆಲ್ : 9986982482, 9686165708

ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿ ಯಶಸ್ವಿಗೊಳಿಸಿ 2

ದೇವಲ ಗಾಣಗಾಪುರ ಜಿ.ಪಂ.ಕ್ಷೇತ್ರದಲ್ಲಿ ಟಿಕೆಟ್ ಪೈಪೋಟಿ! 3

ಹಳ್ಳಿಗಳ ರಸ್ತೆ ಸುಧಾರಿಸಲಿ, ಆಮೇಲೆ ವರ್ತುಲ ರಸ್ತೆ ಬರಲಿ! 4

ಸಂಪುಟ(Volume): 1 ಸಂಚಿಕೆ (Issue): 88 ● ಪುಟ (Page): 4 ● ದರ: Rs. 4 ಶನಿವಾರ 10 ಅಕ್ಟೋಬರ್ 2026 ● 10 OCTOBER 2026 ● ಧಾರವಾಡ ● ಹಾವೇರಿ ● ಗದಗ ● ಕೊಪ್ಪಳ ● ವಿಜಯನಗರ ● ರಾಯಚೂರು ● ವಿಜಯಪುರ ● ಬಾಗಲಕೋಟೆ

# ಕರುನಾಡಿನಲ್ಲಿ ಹನಿಟ್ರ್ಯಾಪ್ ಬಿರುಗಾಳಿ

## ನನ್ನ ಬಳಿ ಮೂರು ವಿಡಿಯೋಗಳಿವೆ । ಆರ್. ಅಶೋಕ ಹೊಸ ಬಾಂಬ್

**ಬೆಂಗಳೂರು:** ರಾಜ್ಯದಲ್ಲಿ 'ಸ್ಟಿಂಗ್ ಆಪರೇಷನ್' ಮತ್ತು 'ಹನಿಟ್ರ್ಯಾಪ್' ಪ್ರಯತ್ನಗಳಿಗೆ ಸಂಬಂಧಿಸಿದ ರಾಜಕೀಯ ವಿವಾದ ತೀವ್ರಗೊಂಡಿದೆ. ಹನಿಟ್ರ್ಯಾಪ್ ಘಟನೆಗಳಿಗೆ ಸಂಬಂಧಿಸಿವೆ ಎನ್ನಲಾದ ಮೂರು ವಿಡಿಯೋಗಳು ತಮ್ಮ ಬಳಿಯೂ ಇವೆ. ಈ ವಿಷಯವನ್ನು ಲಘುವಾಗಿ ಪರಿಗಣಿಸಬಾರದು. ಆರೋಪಿತ ವಿಡಿಯೋಗಳು ಈ ವಿವಾದದ ಕುರಿತು ಹೆಚ್ಚಿನ ಮಾಹಿತಿ ನೀಡಬಲ್ಲವು ಎಂದು ವಿರೋಧ ಪಕ್ಷದ ನಾಯಕ ಆರ್ ಅಶೋಕ್ ಗುರುವಾರ ಹೇಳಿದ್ದಾರೆ.



ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂವಿಧಾನದಅಡಿಯಲ್ಲಿನೀವು(ಡಿಕೆ ಶಿವಕುಮಾರ್) ಪ್ರಮಾಣವಚನ ಸ್ವೀಕರಿಸಿದ್ದೀರಿ. ನಿಮ್ಮ ಗಮನಕ್ಕೆ ಬಂದ ಮೇಲೆ ಯಾಕೆ ಕ್ರಮ ತೆಗೆದುಕೊಂಡಿಲ್ಲ?. ದಾಖಲೆ ಸಿಕ್ಕಿದ್ದರೂ ಅದನ್ನು ಮುಚ್ಚಿಡುವುದು ಗಂಭೀರ ಅಪರಾಧ. ನನಗೆ ಕೂಡಾ ಕೆಲವು ಈ ಬಗೆಗಿನ ವಿಡಿಯೋಗಳನ್ನು ಕಳುಹಿಸಿದ್ದಾರೆ. ವಿಡಿಯೋಗಳು ಈಗ ಎಲ್ಲರ ಬಳಿಯಲ್ಲೂ ಓಡಾಡುತ್ತಿವೆ. ಇದರ ಬಗ್ಗೆ ಸಿಎಂ ಯಾಕೆ ಇನ್ನೂ ಯಾವುದೇ ಕ್ರಮ ಕೈಗೊಂಡಿಲ್ಲ? ಎಂದು ಪ್ರಶ್ನಿಸಿದರು.

ಇಷ್ಟು ದಿನ ಸಿಎಂ ಡಿಕೆ ಶಿವಕುಮಾರ್ ಭರವಸೆ ಕೊಡುತ್ತಿದ್ದಾರೆ ಎನ್ನಲಾಗಿತ್ತು. ಈಗ ನೋಡಿದರೆ ಗಾಳಿಯಲ್ಲಿ ಗುಂಡು ಹಾರಿಸುವ ಕೆಲಸ ಮಾಡ್ತಿದ್ದಾರೆ. ಸಂಪುಟಸಭೆಯಲ್ಲಿ ಸಚಿವರನ್ನ ಟ್ರ್ಯಾಪ್ ಮಾಡ್ತಿದ್ದಾರೆ ಎಂದು ಹೇಳಿದ್ದಾರೆ. ಕಾನೂನು ಸುವ್ಯವಸ್ಥೆ ಕಾಪಾಡಬೇಕಿರುವ ವ್ಮುಖ್ಯವ್ಮಂತ್ರಿಗಳೇ ಅಸಹಾಯಕ ಸ್ಥಿತಿಯಲ್ಲಿ ನನ್ನ ಮೇಲೆ ಟ್ರ್ಯಾಪ್ ಆಗಿದೆ ಅಂತಿದ್ದಾರೆ. ಸರ್ಕಾರ, ಕ್ಯಾಬಿನೆಟ್ ಸಚಿವರು, ಸಿಎಂಗೇ ಭದ್ರತೆ ಇಲ್ಲವಾದರೆ ಹೇಗೆ. ಯಾರು ಬೇಕಾದರೂ ಅವರನ್ನು ಹನಿಟ್ರ್ಯಾಪ್ ಮಾಡಬಹುದು ಎಂದಿದ್ದಾರೆ.

ನನ್ನ ಮೇಲೆ ಟ್ರ್ಯಾಪ್‌ಗೆ ಯತ್ನಿಸಿದ ಕುರಿತ ದಾಖಲೆ ಇದೆ ಅಂತಾರೆ. ಹಾಗಾದರೆ ಸಿಎಂ ಡಿಕೆ ಶಿವಕುಮಾರ್ ಏಕೆ ದೂರು ನೀಡಿಲ್ಲ?. ಇದರಬಗ್ಗೆಯಾಕಿನ್ನೂಎಫ್‌ಐಆರ್‌ದಾಖಲಿಸಿಲ್ಲ? ನೀವು ಗಾಳಿಯಲ್ಲಿ ಗುಂಡು ಹಾರಿಸುವುದಿದ್ದರೆ ಅದಕ್ಕೆ ಬೇರೆ ಜಾಗವಿದೆ. ಸಿಎಂ ಅಧಿವೇಶನದಲ್ಲಿ ಬೆಂಗಳೂರಿನ ಹೊರಗಿನ ಸಚಿವರು, ಶಾಸಕರು ಎರಡೆರಡು ಮದುವೆಯಾಗಿದ್ದಾರೆ ಎಂದು ಹೇಳಿದ್ದಾರೆ. ಹಾಗಾದರೆ ಅವರ ಮೇಲೆ ಯಾಕೆ ಎಫ್‌ಐಆರ್ ಮಾಡಿಲ್ಲ? ಎಂದು ಪ್ರಶ್ನಿಸಿದ್ದಾರೆ.

ಕರ್ನಾಟಕದ ಸಚಿವರು ಮತ್ತು ರಾಜಕೀಯ ನಾಯಕರನ್ನು ಗುರಿಯಾಗಿಸಿಕೊಂಡು 'ಸ್ಟಿಂಗ್ ಆಪರೇಷನ್' ನಡೆಸುವ ಸಾಧ್ಯತೆ ಕುರಿತಾದ ಆರೋಪಗಳು ಆಡಳಿತಾರೂಢ ಕಾಂಗ್ರೆಸ್ ಮತ್ತು ಪ್ರತಿಪಕ್ಷ ಬಿಜೆಪಿಯ ನಡುವೆ ಹೊಸ ಸಂಘರ್ಷಕ್ಕೆ ಕಾರಣವಾಗಿರುವ ಈ ಸಂದರ್ಭದಲ್ಲಿಯೇ ಈ ಹೇಳಿಕೆ ಹೊರಬಿದ್ದಿದೆ.

ಸಂಭಾವ್ಯಸ್ಟಿಂಗ್ ಆಪರೇಷನ್‌ಗಳ ಬಗ್ಗೆ ಎಚ್ಚರದಿಂದಿರುವಂತೆ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ತಮ್ಮ ಸಚಿವರಿಗೆ ಸೂಚನೆ ನೀಡಿದ್ದಾರೆ ಎಂದು ವರದಿಯಾಗಿದೆ; ಅದೇ ವೇಳೆ, ಇಂತಹಕಾರ್ಯಾಚರಣೆಗಳಮೂಲಕಸರ್ಕಾರಕ್ಕೆಅಪಖ್ಯಾತಿ ತರುವ ಪ್ರಯತ್ನಗಳ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ ಎಂದು ಉಪಮುಖ್ಯಮಂತ್ರಿ ಜಿ ಪರಮೇಶ್ವರ ಹೇಳಿದ್ದಾರೆ.

ಕರ್ನಾಟಕ ರಾಜಕೀಯದಲ್ಲಿ 'ಹನಿಟ್ರ್ಯಾಪ್' ಪ್ರಯತ್ನಗಳು ನಡೆದಿವೆ ಎಂಬ ಆರೋಪಗಳನ್ನು ವಿರೋಧ ಪಕ್ಷವು ಈ ಹಿಂದೆ ಎತ್ತಿದ್ದು, ಈ ವಿಷಯದ ಕುರಿತು ತನಿಖೆ ನಡೆಸುವಂತೆ ಆಗ್ರಹಿಸಿದೆ.

## ವಾರದಲ್ಲಿ ದಾಖಲೆ ಬಿಡುಗಡೆ

**ಮಂಡ್ಯ:** ಸ್ಟಿಂಗ್ ಆಪರೇಷನ್ ವಿಷಯ ರಾಜ್ಯ ರಾಜಕೀಯದಲ್ಲಿ ಈಗ ಭಾರೀ ಸಂಚಲನ ಉಂಟುಮಾಡುತ್ತಿದೆ. ಕಾಂಗ್ರೆಸ್-ಬಿಜೆಪಿ ನಾಯಕರ ನಡುವೆ ತೀವ್ರ ವಾಕ್ಸಮರಕ್ಕೆ ಕಾರಣವಾಗಿದೆ.



ಹೆಚ್.ಡಿ. ಕುಮಾರಸ್ವಾಮಿ ಅವರ ರೀತಿಯಲ್ಲಿ ಪೆನ್ ಡ್ರೈವ್ ಪ್ರದರ್ಶಿಸಿ ಇನ್ನೊಂದು ವಾರದಲ್ಲಿ ಸ್ಟಿಂಗ್ ಕುತಂತ್ರದ ಬಗ್ಗೆ ದಾಖಲೆ ಬಿಡುಗಡೆ ಮಾಡುತ್ತೇನೆ ಎಂದು ಮಂಡ್ಯದಲ್ಲಿ ಇಂದು ಕಾಂಗ್ರೆಸ್ ಶಾಸಕ ಗಣಿಗ ರವಿ ಸ್ಫೋಟಕ ಆರೋಪ ಮಾಡಿದ್ದಾರೆ. ಡಿಕೆಶಿ ಸಿಎಂ ಆದಮೇಲೆ ಅಭಿವೃದ್ಧಿ ಶರವೇಗ ಪಡೆದುಕೊಂಡಿದೆ. ಇದನ್ನು ಸಹಿಸದೆ ವಿಪಕ್ಷಗಳ ನಾಯಕರು ಅಪಪ್ರಚಾರ ಮಾಡುತ್ತಿದ್ದಾರೆ ಎಂದು ದೂರಿದರು.

ಕೇಂದ್ರ ಸಚಿವರೊಬ್ಬರು ಮತ್ತು ಕರ್ನಾಟಕದ ಬಿಜೆಪಿ ನಾಯಕರೊಬ್ಬರು ರಾಜ್ಯದ ಸಚಿವರ ವಿರುದ್ಧ ಸ್ಟಿಂಗ್ ಆಪರೇಷನ್ ನಡೆಸಿ, ಸರ್ಕಾರಕ್ಕೆ ಮುಜುಗರ ಉಂಟುಮಾಡಲು ದೆಹಲಿ ಮೂಲದ ಏಜೆನ್ಸಿಯೊಂದಕ್ಕೆ ಸುಪಾರಿ ನೀಡಿದ್ದಾರೆ. ಈ ಸಂಬಂಧ ಸಿಸಿಟಿವಿ ದೃಶ್ಯಗಳು, ಆಡಿಯೋ ಮತ್ತು ವಿಡಿಯೋ ದಾಖಲೆಗಳಿರುವ ಪೆನ್‌ಡ್ರೈವ್ ಪ್ರದರ್ಶಿಸಿದ ಗಣಿಗ ರವಿ, ಒಂದು ವಾರದೊಳಗೆ ಸಾಕ್ಷ್ಯಗಳನ್ನು ಬಿಡುಗಡೆ ಮಾಡುವುದಾಗಿ ತಿಳಿಸಿದ್ದಾರೆ. ಈ ಕುರಿತು ದೂರು ಕೂಡ ದಾಖಲಿಸಲಾಗುವುದು ಎಂದು ಹೇಳಿದ್ದಾರೆ.

10 ಸಚಿವರನ್ನು ಗುರಿಯಾಗಿಸಿ ಸ್ಟಿಂಗ್ ಆಪರೇಷನ್ ಮಾಡಲು ಪ್ರಯತ್ನಗಳು ನಡೆದಿವೆ. ಸ್ಟಿಂಗ್ ಮಾಡಿ ಸರ್ಕಾರಕ್ಕೆ ಮುಜುಗರ ತರುವ ಪ್ಲಾನ್ ಅವರದ್ದಾಗಿದೆ. ಆದರೆ ನಮ್ಮ ಸಚಿವರು ಶುದ್ಧ ಹಸ್ತರಿದ್ದಾರೆ, ಅವರ ಬಲೆಗೆ ಬಿದ್ದಿಲ್ಲ. ಸ್ಟಿಂಗ್ ಮಾಡಿಸಲು ಸುಪಾರಿ ಕೊಟ್ಟಿರುವ ಬಗ್ಗೆ ಎಲ್ಲಾ ದಾಖಲೆ ಇದೆ. ಸೂಕ್ತ ಸಮಯದಲ್ಲಿ ಬಿಡುಗಡೆ ಮಾಡುತ್ತೇನೆ ಎಂದರು. ಇದು ಹಿಟ್ ಆಂಡ್ ರನ್ ಆಗಲ್ಲ, ಯಾವ ಏಜೆನ್ಸಿ, ಯಾರು ಭಾಗಿಯಾಗಿದ್ದಾರೆ, ಎಷ್ಟು ಹಣ ಕೊಟ್ಟಿದ್ದಾರೆ ಯಾವ್ಯಾವ ಸಚಿವರನ್ನು ಭೇಟಿಯಾಗಿದ್ದಾರೆ, ಯಾವ್ಯಾವ ನಾಯಕರ ಪಿಎಗಳಿದ್ರು ಎಂಬ ಎಲ್ಲಾ ದಾಖಲೆಗಳಿವೆ. ಸಿಸಿಟಿವಿ, ಆಡಿಯೋ, ವೀಡಿಯೋ ಸಮೇತ ದಾಖಲೆ ಇದೆ. ದಾಖಲೆ ಇರುವುದರಿಂದಲೇ ಸಿಎಂ ಕ್ಯಾಬಿನೆಟ್‌ನಲ್ಲಿ ಎಚ್ಚರಿಕೆ ನೀಡಿದ್ದರು. 1 ವಾರದೊಳಗೆ ತನಿಖಾಧಿಕಾರಿ ಮುಂದೆ ದಾಖಲೆ ಇಡುತ್ತೇವೆ. ಮಾಧ್ಯಮಗಳ ಮುಂದೆಯೂ ಎಲ್ಲಾ ದಾಖಲೆ ಬಿಡುಗಡೆ ಮಾಡ್ತೀನಿ ಎಂದು ಗಣಿಗ ರವಿ ಪೆನ್‌ಡ್ರೈವ್ ಪ್ರದರ್ಶಿಸಿದರು.

## ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿಗೆ ತಾತ್ಕಾಲಿಕ ರಿಲೀಫ್

ಬೆಂಗಳೂರು: ಧಾರವಾಡದ ಬಿಜೆಪಿ ಮುಖಂಡ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಅವರಿಗೆ ತಾತ್ಕಾಲಿಕ ರಿಲೀಫ್ ಸಿಕ್ಕಿದೆ.



ವಿನಯ್ ಕುಲಕರ್ಣಿಗೆ ನೀಡಿದ್ದ ಜೀವಾವಧಿ ಶಿಕ್ಷೆಗೆ ತಡೆ ನೀಡಿ, ಜಾಮೀನು ಮಂಜೂರು ಮಾಡಿರುವ ಕರ್ನಾಟಕ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಿಬಿಐ ಸಲ್ಲಿಸಿರುವ ಮೇಲ್ಮನವಿ ಅರ್ಜಿಯ ವಿಚಾರಣೆ ಶುಕ್ರವಾರ ಸುಪ್ರೀಂ ಕೋರ್ಟ್‌ನಲ್ಲಿ ನಡೆಯಿತು.

ಸಿಬಿಐ ಮತ್ತು ಯೋಗೀಶ್ ಗೌಡ ಅವರ ಸಹೋದರ ಗುರುನಾಥ್ ಗೌಡ ಅವರು ಸಲ್ಲಿಸಿರುವ ಮೇಲ್ಮನವಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಚಂದ್ರಶೇಖರ್‌ಅವರಿದ್ದಪೀಠ,ಪ್ರತಿವಾದಿಗಳಿಗೆನೋಟಿಸ್‌ಜಾರಿಮಾಡಿ, ವಿಚಾರಣೆಯನ್ನು ಅಕ್ಟೋಬರ್ 27ಕ್ಕೆ ಮುಂದೂಡಿದೆ.

ಸಿಬಿಐ ಪರ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರು, ಅಪರೂಪದ ಪ್ರಕರಣಗಳಲ್ಲಿ ಮಾತ್ರ ಶಿಕ್ಷೆಗೆ ತಡೆಯಾಜ್ಞೆ ನೀಡಬೇಕು ಎಂದು ವಾದಿಸಿದರು. ಈ ಸಂಬಂಧ ಸುಪ್ರೀಂ ಕೋರ್ಟ್‌ನ ಮೂರು ತೀರ್ಪುಗಳನ್ನು ಉಲ್ಲೇಖಿಸಿದರು. ಸಾರ್ವಜನಿಕ ಸೇವಕರಾಗಿರುವ ವ್ಯಕ್ತಿಗಳಿಗೆ ಸಹಜವಾಗಿ ಶಿಕ್ಷೆಗೆ ತಡೆಯಾಜ್ಞೆ ನೀಡಬಾರದು ಎಂಬ ವಾದಿಸಿದರು.

ಈ ಹಿಂದೆ ಸಾಕ್ಷ್ಯ ನಾಶಪಡಿಸಿದ ಆರೋಪದ ಹಿನ್ನೆಲೆಯಲ್ಲಿ ವಿನಯ್ ಕುಲಕರ್ಣಿ ಅವರ ಜಾಮೀನನ್ನು ಸುಪ್ರೀಂಕೋರ್ಟ್ ರದ್ದುಗೊಳಿಸಿತ್ತು ಎಂದು ಸಿಬಿಐ ನ್ಯಾಯಾಲಯದ ಗಮನಕ್ಕೆ ತಂದಿತು. ಅಲ್ಲದೆ, ಹಿಂದಿನ ಎರಡು ಕ್ರಿಮಿನಲ್ ಪ್ರಕರಣಗಳ ವಿವರಗಳನ್ನು ಹೈಕೋರ್ಟ್ ಮುಂದೆ ಬಹಿರಂಗಪಡಿಸಿಲ್ಲ ಎಂದೂ ಸಿಬಿಐ ವಾದಿಸಿತು.

## ಮೈಸೂರು ದಸರಾ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಲು ಹಾಲಕೆರೆ ಶ್ರೀಗಳಿಗೆ ಆಹ್ವಾನ!

### ಅ. 11ರಂದು ಚಾಮುಂಡಿ ಬೆಟ್ಟದಲ್ಲಿ ದಸರಾ ಉದ್ಘಾಟನಾ ಸಮಾರಂಭ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಗೌರವಪೂರ್ವಕ ಆಹ್ವಾನ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ :** ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸುವಂತೆ ಗದಗ ಜಿಲ್ಲೆಯ ಹಾಲಕೆರೆ ಶ್ರೀ ಅನ್ನದಾನೇಶ್ವರ ಸಂಸ್ಥಾನಮಠದ ಜಗದ್ಗುರು ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಅಧಿಕೃತವಾಗಿ ಆಹ್ವಾನಿಸಲಾಯಿತು.

ಅ. 11ರಂದು ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ನಡೆಯಲಿರುವ ದಸರಾ ಉದ್ಘಾಟನಾ ಸಮಾರಂಭದಲ್ಲಿ ಸಾನಿಧ್ಯ ವಹಿಸುವಂತೆ ಶ್ರೀಗಳಿಗೆ ಆಮಂತ್ರಣ ಪತ್ರಿಕೆ ನೀಡಿ ಗೌರವಪೂರ್ವಕವಾಗಿ ಆಹ್ವಾನಿಸಲಾಯಿತು.

ಈ ಸಂದರ್ಭದಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯ ಶಂಕ್ರಣ್ಣ ಸಂಕಣ್ಣವರ, ಗದಗ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀಕ್ಷಕ ರಾಜಕುಮಾರ ಸೊಪ್ಪಡ್ಲ ಹಾಗೂ ನವೀನ ಕುಮಾರ ಪತ್ತಾರ ಅವರು ಹಾಲಕೆರೆ ಶ್ರೀಮಠಕ್ಕೆ ಭೇಟಿ ನೀಡಿ, ಆಮಂತ್ರಣ ಪತ್ರಿಕೆ ಸಲ್ಲಿಸುವ ಮೂಲಕ ಶ್ರೀಗಳನ್ನು ಆಹ್ವಾನಿಸಿದರು. ನಾಡಿನ ಸಾಂಸ್ಕೃತಿಕ ಪರಂಪರೆ ಹಾಗೂ ಧಾರ್ಮಿಕ ಶ್ರದ್ಧೆಯ ಪ್ರತೀಕವಾಗಿರುವ ಮೈಸೂರು ದಸರಾ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಸಾನಿಧ್ಯ ವಹಿಸಲು ಹಾಲಕೆರೆ ಶ್ರೀಗಳಿಗೆ ಆಹ್ವಾನ ನೀಡಿರುವುದು ಶ್ರೀಮಠದ ಭಕ್ತರು ಹಾಗೂ ಧಾರ್ಮಿಕ ವಲಯದಲ್ಲಿ ಸಂತಸ ಮೂಡಿಸಿದೆ.



## ಬೆಳಗಾವಿ ಹಿಂಡಲಗಾ ಜೈಲಿಗೆ ಪ್ರಜ್ವಲ್ ಶಿಫ್ಟ್

**ಬೆಂಗಳೂರು:** ಜೀವಾವಧಿ ಶಿಕ್ಷೆಗೊಳಗಾದ ಕೈದಿ ಪ್ರಜ್ವಲ್ ರೇವಣ್ಣ ಅವರನ್ನ ಬೆಂಗಳೂರು ಸೆಂಟ್ರಲ್ ಜೈಲಿನಿಂದ ಬೆಳಗಾವಿಯ ಹಿಂಡಲಗಾ ಜೈಲಿಗೆ ವರ್ಗಾವಣೆ ಮಾಡಲಾಗುತ್ತಿದೆ. ಈ ದಿಢೀರ್ ನಿರ್ಧಾರಕ್ಕೆ ಇತ್ತೀಚೆಗೆ ಜೈಲಿನಲ್ಲಿ ನಡೆಸ ಅಕ್ರಮ ಚಟುವಟಿಕೆಗಳೇ ಕಾರಣ ಎನ್ನಲಾಗಿದೆ.



ಕಾರಾಗೃಹ ಮತ್ತು ಸುಧಾರಣೆ ಸೇವೆ ಇಲಾಖೆ ಡಿಜಿಪಿ ಅಲೋಕ್‌ಕುಮಾರ್ ಅವರು ಪ್ರಜ್ವಲ್ ವರ್ಗಾವಣೆ ಬಗ್ಗೆ ಮಹತ್ವದ ಆದೇಶ ಹೊರಡಿಸಿದ್ದಾರೆ. ಪರಪ್ಪನ ಅಗ್ರಹಾರ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿರುವ ಪ್ರಜ್ವಲ್ ರೇವಣ್ಣ ಅವರ ಬ್ಯಾರಕ್ ಮೇಲೆ ಸಿಸಿಬಿ ಪೊಲೀಸರು ನಡೆಸಿದ ದಿಢೀರ್ ಪರಿಶೀಲನೆ ವೇಳೆ ಸ್ಮಾರ್ಟ್‌ಫೋನ್, ಚಾರ್ಜರ್, ಆಂಧ್ರಪ್ರದೇಶ ಮೂಲದ ಸಿಮ್ ಕಾರ್ಡ್ ಹಾಗೂ ಪೆನ್‌ಡ್ರೈವ್ ಪತ್ತೆಯಾಗಿತ್ತು. ಜೈಲಿನಲ್ಲಿದ್ದೇ ಅವರು ಹೊರಗಿನ ವ್ಯಕ್ತಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದರು ಮತ್ತು ಮೊಬೈಲ್ ಬಳಕೆ ಮಾಡುತ್ತಿದ್ದರು ಎನ್ನುವ ದೃಶ್ಯಗಳು ಹಾಗೂ ಮಾಹಿತಿ ಬಹಿರಂಗವಾಗಿ ಭಾರಿ ಕೋಲಾಹಲ ಸೃಷ್ಟಿಸಿತ್ತು.

ಘಟನೆ ಬಳಿಕ ಮೊದಲ ಹಂತವಾಗಿ ಪ್ರಜ್ವಲ್ ರೇವಣ್ಣ ಅವರಿಗಿದ್ದ ಪ್ರತ್ಯೇಕ ಸೆಲ್ ಸೌಲಭ್ಯವನ್ನು ರದ್ದುಗೊಳಿಸಿ, ಸಿಸಿಟಿವಿ ಕಣ್ಗಾವಲಿರುವ ಸಾಮಾನ್ಯ ಕೈದಿಗಳ ಬ್ಯಾರಕ್‌ಗೆ ಸ್ಥಳಾಂತರಿಸಲಾಯಿತು. ಆದರೆ, ಬೆಂಗಳೂರಿನ ಪರಪ್ಪನ ಅಗ್ರಹಾರದಲ್ಲಿ ಪ್ರಭಾವ ಬಳಸಿ ಮತ್ತೆ ಅಕ್ರಮ ಚಟುವಟಿಕೆಗಳು ಮುಂದುವರಿಯುವ ಆತಂಕ ಹಾಗೂ ಭದ್ರತಾ ಕಾರಣಗಳಿಂದಾಗಿ, ಅವರನ್ನು ಕಠಿಣ ನಿಯಮಾವಳಿಗಳುಳ್ಳ ದೂರದ ಬೆಳಗಾವಿಯ ಹಿಂಡಲಗಾ ಜೈಲಿಗೆ ವರ್ಗಾಯಿಸಲು ಕಾರಾಗೃಹ ಇಲಾಖೆ ಹಾಗೂ ಗೃಹ ಇಲಾಖೆ ಮುಂದಾಗಿದೆ.

**ಕೆಲಕಾಲನ್ಯಾಯಾಂಗಬಂಧನದಲ್ಲಿಟ್ಟುವಿಚಾರಣೆ:** ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಮೊಬೈಲ್ ಬಳಸಿದ್ದ ಪ್ರಕರಣ ಸಂಬಂಧ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಹಾಗೂ ಕೃತ್ಯಕ್ಕೆ ಸಹಕರಿಸಿದ್ದ ವಿಚಾರಣಾಧೀನ ಕೈದಿ ಪ್ರತಾಪ್ ರೇ ವಿಚಾರಣೆ ಪೂರ್ಣಗೊಂಡಿದ್ದು, ಎಸಿಜೆಎಂ ನ್ಯಾಯಾಲಯವು ಈ ಇಬ್ಬರನ್ನೂ ಕಳೆದ ತಿಂಗಳು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಆ ವೇಳೆ ಜೈಲಿಗೆ ಮೊಬೈಲ್ ತಂದು ಕೊಟ್ಟಿದ್ದು ಯಾರು? ಯಾರ ಜತೆ ಮಾತುಕತೆ ನಡೆಸಿದ್ದೆ? ಎಂಬ ಪ್ರಶ್ನೆಗೆ ಪ್ರಜ್ವಲ್ ಸ್ಪಷ್ಟವಾಗಿ ಉತ್ತರಿಸಿಲ್ಲ. ಪ್ರತಾಪ್ ರೇ ಮೊಬೈಲ್ ಕೊಟ್ಟಿದ್ದು, ಅದನ್ನು ಬಳಸುತ್ತಿದ್ದೆ. ಬೇರೆ ಮಾಹಿತಿ ಗೊತ್ತಿಲ್ಲ ಎಂದು ಪ್ರಜ್ವಲ್ ಹೇಳಿಕೆ ನೀಡಿದ್ದರು.

ಮತ್ತೊಂದೆಡೆ ಪ್ರತಾಪ್ ರೇ, ಮೊಬೈಲ್‌ಗೂ ತನಗೂ ಸಂಬಂಧವಿಲ್ಲ. ಜೈಲಿನೊಳಗೆ ಯಾರೋ ಮೊಬೈಲ್ ತಂದು ಕೊಟ್ಟರು, ಅದನ್ನು ಪ್ರಜ್ವಲ್‌ಗೆ ನೀಡಿದ್ದೆನೆ ಹೊರತು ಹೆಚ್ಚಿನ ಮಾಹಿತಿಯಿಲ್ಲಎಂದು ಹೇಳಿದ್ದನು. ಇಬ್ಬರ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದ್ದರು. ಪ್ರಜ್ವಲ್, ಜೈಲಿನಿಂದಲೇ ತಂದೆ ರೇವಣ್ಣ ಮತ್ತು ತಾಯಿ ಭವಾನಿ ಹಾಗೂ ಸ್ನೇಹಿತರಿಗೆ ಮೊಬೈಲ್ ಕರೆ ಮಾಡಿ ಮಾತನಾಡಿರುವುದು ತನಿಖೆ ವೇಳೆ ಗೊತ್ತಾಗಿತ್ತು.

### ದರ್ಶನ್ ಅವರನ್ನೂ ಬಳ್ಳಾರಿಗೆ ಹಾಕಲಾಗಿತ್ತು!

ಹಿಂದೆ ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ನಟ ದರ್ಶನ್ ಅವರಿಗೆ ಜೈಲಿನಲ್ಲಿ ರಾಜಾತಿಥ್ಯ ಸಿಕ್ಕ ವಿವಾದ ಭುಗಿಲೆದ್ದಾಗಲೂ ಅವರನ್ನು ಬಳ್ಳಾರಿ ಜೈಲಿಗೆ ಹಾಗೂ ಇತರೆ ಆರೋಪಿಗಳನ್ನು ಹಿಂಡಲಗಾ ಸೇರಿದಂತೆ ವಿವಿಧ ಜಿಲ್ಲೆಗಳ ಜೈಲುಗಳಿಗೆ ಸ್ಥಳಾಂತರಿಸಲಾಗಿತ್ತು.

## ಮುಜರಾಯಿ ಇಲಾಖೆ ವ್ಯಾಪ್ತಿಗಿದ್ದ ಅಂಜನಾದ್ರಿ ಬೆಟ್ಟ ಅಧಿಸೂಚನೆ ರದ್ದುಪಡಿಸಿದ ಧಾರವಾಡ ಹೈಕೋರ್ಟ್

**ಧಾರವಾಡ:** ಹನುಮಂತನ ಜನ್ಮಸ್ಥಳವಾಗಿರುವ, ಕೊಪ್ಪಳ ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಅಂಜನಾದ್ರಿ ಬೆಟ್ಟದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ವಿವಾದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಹೈಕೋರ್ಟ್‌ನ ಧಾರವಾಡ ಪೀಠವು ರಾಜ್ಯ ಸರ್ಕಾರಕ್ಕೆ ಭಾರಿ ಹಿನ್ನಡೆ ನೀಡುವ ಮಹತ್ವದ ತೀರ್ಪನ್ನು ಪ್ರಕಟಿಸಿದೆ. ಅದರಂತೆ, ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯಪೀಠವು,ಅಂಜನಾದ್ರಿದೇವಸ್ಥಾನವನ್ನು ಸರ್ಕಾರದ ಹಿಂದೂ ಧಾರ್ಮಿಕ ಮತ್ತು ಧಾರ್ಮಿಕ ದತ್ತಿ (ಮುಜರಾಯಿ) ಇಲಾಖೆಯ ವ್ಯಾಪ್ತಿಗೆ ಒಳಪಡಿಸಿ ಹೊರಡಿಸಲಾಗಿದ್ದ ಅಧಿಸೂಚನೆ ಹಾಗೂ ಆಡಳಿತಾಧಿಕಾರಿ ನೇಮಕದ ಆದೇಶ ಎರಡನ್ನೂ ಸಂಪೂರ್ಣವಾಗಿ ರದ್ದುಗೊಳಿಸಿದೆ.



**ಏನಿದು ವಿವಾದ?:** 2018 ರಲ್ಲಿ ಅಂದಿನ ರಾಜ್ಯ ಸರ್ಕಾರವು ಅಂಜನಾದ್ರಿ ದೇವಸ್ಥಾನವನ್ನು ಹಿಂದೂ ಧಾರ್ಮಿಕ ಮತ್ತು ಧಾರ್ಮಿಕ ದತ್ತಿ (ಮುಜರಾಯಿ) ಇಲಾಖೆಯ ವ್ಯಾಪ್ತಿಗೆ ಒಳಪಡಿಸಿ ಅಧಿಕೃತ ಅಧಿಸೂಚನೆ ಹೊರಡಿಸಿತು. ಅದರಂತೆ, ದೇವಸ್ಥಾನದ ಆಡಳಿತದಲ್ಲಿ ಅಕ್ರಮಗಳು ನಡೆಯುತ್ತಿವೆ ಮತ್ತು ಸೂಕ್ತ ನಿರ್ವಹಣೆ ಇಲ್ಲ ಎಂಬ ಕಾರಣ ನೀಡಿ, ಕೊಪ್ಪಳ ಜಿಲ್ಲಾಡಳಿತವು ದೇವಸ್ಥಾನದ ಉಸ್ತುವಾರಿಗೆ ತಹಶೀಲ್ದಾರ್ ದರ್ಜೆಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ನೇಮಕ ಮಾಡಿ ಆದೇಶ ಹೊರಡಿಸಿತು. ಆದರೆ, ದೇವಸ್ಥಾನದ ಪ್ರಧಾನ ಅರ್ಚಕರಾದ ವಿದ್ಯಾದಾಸ ಬಾಬಾ ಅವರು ಸರ್ಕಾರದ ಈ ಕ್ರಮವನ್ನು ತೀವ್ರವಾಗಿ ವಿರೋಧಿಸಿದರು. ತಮ್ಮ ಪೂರ್ವಜರ ಕಾಲದಿಂದಲೂ ತಾವೇ ದೇವಸ್ಥಾನದ ಪೂಜೆ ಹಾಗೂ ನಿರ್ವಹಣೆಯನ್ನು ಮಾಡಿಕೊಂಡು ಬರುತ್ತಿದ್ದು, ಇದು ತಮಗೆ ಸೇರಿದ ಪಾರಂಪರಿಕ ಹಕ್ಕಾಗಿದೆ ಎಂದು ವಾದಿಸಿದರು. ಜೊತೆಗೆ, ಸರ್ಕಾರ ಮತ್ತು ಜಿಲ್ಲಾಡಳಿತವು ತಮಗೆ ಯಾವುದೇ ಮುನ್ಸೂಚನೆ ಅಥವಾ ನೋಟಿಸ್ ನೀಡದೆ, ಏಕಪಕ್ಷೀಯವಾಗಿ ದೇವಸ್ಥಾನವನ್ನು ಮುಜರಾಯಿ ಇಲಾಖೆಗೆ ಸೇರಿಸಿದೆ ಹಾಗೂ ತಮಗೆ ಪೂಜೆ ಸಲ್ಲಿಸಲು ಅಡ್ಡಿಪಡಿಸುತ್ತಿದೆ ಎಂದು ಆರೋಪಿಸಿ ಹೈಕೋರ್ಟ್ ಮೆಟ್ಟಿಲೇರಿದರು.

ಸತ್ಯ ಮಿಥ್ಯ

ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ

SATYA MITHI
Kannada Daily Morning

## ಧವಳಗಿ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನ

**ಸತ್ಯಮಿಥ್ಯ ಸುದ್ದಿಮೂಲ ಧವಳಗಿ:** ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ವಿಜಯಪುರ ಹಾಗೂ ವಿಜಯಪುರದ ವಿ.ಬಿ.ದರ್ಬಾರ್ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಸಪ್ಟೆಂಬರ್ 27ರಂದು ಜರುಗಿದ 2026–27ನೇ ಸಾಲಿನ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿಮುದ್ದೇಬಿಹಾಳತಾಲ್ಲೂಕಿನ ಧವಳಗಿ ಗ್ರಾಮದ ಸನಾತನ ವಿದ್ಯಾವರ್ಧಕ ಸಂಘದ ಅಡಿಯಲ್ಲಿ ನಡೆಯುತ್ತಿರುವ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಸಾಧನೆ ಮಾಡಿದ್ದಾರೆ.




ಕಾಲೇಜಿನ ವಿದ್ಯಾರ್ಥಿಯಾದ ಆಸೀಪ್ ಎಸ್. ಮುಜಾವರ್ ಫ್ರೀಸ್ಟೈಲ್ ಕುಸ್ತಿಯ 57 ಕೆಜಿ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದರೆ, ಶರೀಫ್ ಅಲ್ಲಿಸಾ ಪಿಂಜಾರ ವಿದ್ಯಾರ್ಥಿಯು ಬಾಲಕರ 62 ಕೆಜಿ ಫ್ರೀಸ್ಟೈಲ್ ಕುಸ್ತಿ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಸಾಧನೆಗೈದ ಈ ಇಬ್ಬರೂ ವಿದ್ಯಾರ್ಥಿಗಳಿಗೆ ಅಕ್ಟೋಬರ್ 8, ಗುರುವಾರದಂದು ಪ್ರಾಚಾರ್ಯರಾದ ಮನೋಹರ ಚವ್ಹಾಣ, ಹಾಗೂ ಉಪನ್ಯಾಸಕರಾದ ವಿ. ಕೆ. ಮಾಲಗತ್ತಿ ಮತ್ತು ಸುಮನ್ ತೋರವಿ ಅವರು ಪ್ರಶಸ್ತಿ ಪತ್ರ ವಿತರಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಪ್ರಭುಗೌಡ ದೇಸಾಯಿ, ಪ್ರಾಚಾರ್ಯರಾದ ಮನೋಹರ ಚವ್ಹಾಣ ಹಾಗೂ ಉಪನ್ಯಾಸಕರು ಸೇರಿದಂತೆ ಇತರರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

## ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿ ಯಶಸ್ವಿಗೊಳಿಸಿ

### ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳ | ಅಚ್ಚುಕಟ್ಟಾದ ವ್ಯವಸ್ಥೆಗೆ ಡಿಸಿ ಸಿ.ಎನ್. ಶ್ರೀಧರ ಸೂಚನೆ

**ಸತ್ಯಮಿಥ್ಯ ಸುದ್ದಿಮೂಲ ಗದಗ :** ಜಿಲ್ಲೆಯಲ್ಲಿ ಆಯೋಜಿಸಲಾಗಿರುವ ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿಯನ್ನುಅತ್ಯಂತಯಶಸ್ವಿಯಾಗಿಹಾಗೂಸುವ್ಯವಸ್ಥಿತವಾಗಿ ನಡೆಸಬೇಕೆಂದು ಜಿಲ್ಲಾಧಿಕಾರಿ ಸಿ. ಎನ್. ಶ್ರೀಧರ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಅಕ್ಟೋಬರ್ (9) ರಂದು ಜರುಗಿದ ಗದಗ ಜಿಲ್ಲೆಗೆ ವಹಿಸಿರುವ ರಾಜ್ಯಮಟ್ಟದ ಕುಸ್ತಿ ಪಂದ್ಯಾವಳಿಯ ನಿಮಿತ್ಯ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಭೆಯಲ್ಲಿ ಪಂದ್ಯಾವಳಿಯ ಯಶಸ್ಸಿಗಾಗಿ ವಿವಿಧ ಸಮಿತಿಗಳ ಸಿದ್ಧತೆಗಳನ್ನು ಪರಾಮರ್ಶಿಸಿದ ಜಿಲ್ಲಾಧಿಕಾರಿಗಳು, ಅಧಿಕಾರಿಗಳಿಗೆ ಹಾಗೂ ಸಂಘಟಕರಿಗೆ ಅಗತ್ಯ ನಿರ್ದೇಶನಗಳನ್ನು ನೀಡಿದರು.

ವಸತಿ ಮತ್ತು ಸಾರಿಗೆ ವ್ಯವಸ್ಥೆ: ವಿವಿಧ ಜಿಲ್ಲೆಗಳಿಂದ ಆಗಮಿಸುವ 14/17 ವಯೋಮಿತಿಯ ಕ್ರೀಡಾಪಟುಗಳು, ಕೋಚ್‌ಗಳು ಹಾಗೂ ತಂಡಗಳಿಗೆ ಸೂಕ್ತ ವಸತಿ ಹಾಗೂ ಕ್ರೀಡಾಂಗಣಕ್ಕೆ ಬರಲು ಸಾರಿಗೆ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಸಿದ್ಧಪಡಿಸಬೇಕು. ಕ್ರೀಡಾಪಟುಗಳ ಪಟ್ಟಿ ಮತ್ತು ಸಮಯ ಪಾಲನೆ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸುವ ಕ್ರೀಡಾಪಟುಗಳ ನಿಖರವಾದ ಸಂಖ್ಯೆ, ಆಗಮನದ ಸಮಯ ಮತ್ತು ಅವರ ತಂಗುವಿಕೆಯ ಪಟ್ಟಿಯನ್ನು ಸಮಿತಿಯು ಶೀಘ್ರವೇ ಸಿದ್ಧಪಡಿಸಿ ಸಲ್ಲಿಸಬೇಕು ಎಂದರು.

ಕುಸ್ತಿಯಲ್ಲಿ ಭಾಗವಹಿಸುವ ಕ್ರೀಡಾಪಟುಗಳ ಆರೋಗ್ಯ ಮತ್ತು ಆಹಾರದ ಬಗ್ಗೆ ವಿಶೇಷ ಗಮನ ಹರಿಸಬೇಕು. ತುರ್ತು ವೈದ್ಯಕೀಯ ಸೇವೆ ಹಾಗೂ ಪ್ರಾಥಮಿಕ ಚಿಕಿತ್ಸಾ ಸೌಲಭ್ಯಗಳನ್ನು ಸ್ಥಳದಲ್ಲಿ ಸದಾ ಸಿದ್ಧವಾಗಿಟ್ಟುಕೊಳ್ಳಬೇಕು. ಕ್ರೀಡಾ ಪಟುಗಳಿಗೆ ವ್ಯವಸ್ಥಿತವಾಗಿ ಯಾವುದೇ ರೀತಿಯ ಗೊಂದಲಗಳಿಗೆ ಆಸ್ಪದ ನೀಡದಂತೆ ಸಾರಿಗೆ, ವಸತಿ, ಆಹಾರ, ಅರೋಗ್ಯ, ಊಟದ ಮತ್ತು ನೀರಿನ ವ್ಯವಸ್ಥೆ ಕಲ್ಪಿಸಬೇಕು. ವೇದಿಕೆ ನಿರ್ವಹಣಾ ಸಮಿತಿಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಬೇಕು ಎಂದು ನಿರ್ದೇಶನ ನೀಡಿದರು.

ಆನ್‌ಲೈನ್ ದಾಖಲೆ ಹಾಗೂ ಖಂಖಿಖ ವೆರಿಫಿಕೇಶನ್: ಕ್ರೀಡಾಪಟುಗಳು ತರುವ ದಾಖಲೆಗಳಲ್ಲಿ ಯಾವುದೇ ಅಕ್ರಮ ಅಥವಾ ವಯೋಮಿತಿ ವಂಚನೆ ನಡೆಯದಂತೆ ತಡೆಯಲು, ಆನ್‌ಲೈನ್‌ನಲ್ಲಿ ಖಂಖಿಖ ತಂತ್ರಾಂಶ ಹಾಗೂ ಶಾಲಾ ದಾಖಲೆಗಳನ್ನು ಕಡ್ಡಾಯವಾಗಿ ನೈಜವಾಗಿ ಪರಿಶೀಲಿಸಬೇಕು. ಪ್ರತಿಯೊಂದು ವಸತಿ ನಿಲಯಕ್ಕೂ (ಹೋಸ್ಟೆಲ್) ಒಬ್ಬೊಬ್ಬರು ಉಸ್ತುವಾರಿ/ನೋಡಲ್ ಅಧಿಕಾರಿಗಳನ್ನು ನಿಯೋಜಿಸಬೇಕು. ಕ್ರೀಡಾಪಟುಗಳ ಪಟ್ಟಿ, ಅಗತ್ಯ ಸೌಲಭ್ಯಗಳು ಮತ್ತು ಸುರಕ್ಷತೆಗೆ ಆದ್ಯತೆ ನೀಡಬೇಕು ಎಂದರು.

ಕ್ರೀಡಾಪಟುಗಳಿಗೆ ಪಂದ್ಯ ನಡೆಸಲು ಸೂಕ್ತ ಮ್ಯಾಟ್ ವ್ಯವಸ್ಥೆ ಹಾಗೂ ಮೂರನೇ ತೀರ್ಪುಗಾರರ ನಿರ್ಧಾರಕ್ಕೆ ಅನುಕೂಲವಾಗುವಂತೆ ಡಿಜಿಟಲ್ ತಂತ್ರಜ್ಞಾನ ವ್ಯವಸ್ಥೆ ಮಾಡಬೇಕು. ತೀರ್ಪುಗಾರರು ಮತ್ತು ಅಫಿಷಿಯಲ್ಸ್ ಅವರ ನಿಖರ ಸಂಖ್ಯೆ ಹಾಗೂ ಕಾರ್ಯನಿರ್ವಹಣೆಯನ್ನು ಸ್ಪಷ್ಟಪಡಿಸಬೇಕು. ಪಂದ್ಯಾವಳಿಗೆ ಆಗಮಿಸುವ ಪೈಲ್ವಾನರ ಆಹಾರ ಶೈಲಿಗೆ ತಕ್ಕಂತೆ (ಚಪಾತಿ, ಧಾನ್ಯಗಳು ಇತ್ಯಾದಿ) ಪೌಷ್ಟಿಕ ಹಾಗೂ ಸತ್ವಯುತ ಆಹಾರದ ವ್ಯವಸ್ಥೆ ಮಾಡಬೇಕು. ಪಂದ್ಯಗಳು ನಿಗದಿತ ವೇಳಾಪಟ್ಟಿಯಂತೆ ಸಾಗುವಂತೆ ನೋಡಿಕೊಳ್ಳಬೇಕು. ಪಂದ್ಯಾವಳಿಯಲ್ಲಿ ಯಾವುದೇ ಸಣ್ಣ ಮಟ್ಟದ ನ್ಯೂನತೆಗಳಾಗದಂತೆ ಅಧಿಕಾರಿಗಳು ಶಿಸ್ತು ಹಾಗೂ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕೆಂದು ಜಿಲ್ಲಾಧಿಕಾರಿ ಸಿ. ಎನ್. ಶ್ರೀಧರ ಅಧಿಕಾರಿಗಳಿಗೆ ಸೂಚಿಸಿದರು. ಈ ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮುಕುಲ್ ಜೈನ್, ಅಪರ ಜಿಲ್ಲಾಧಿಕಾರಿ ಡಾ. ದುರ್ಗೇಶ್ ಕೆ ಆರ್, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕಿ ಶ್ರೀಮತಿ ಡಾ. ನಂದಾ ಹಣಬರಟ್ಟಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಆರ್.ಎಸ್. ಬುರಡಿ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಪಂದ್ಯಾವಳಿ ಸಂಘಟನಾ ಸಮಿತಿಯ ಪದಾಧಿಕಾರಿಗಳು ಹಾಜರಿದ್ದರು.



## ದೇವಲ ಗಾಣಗಾಪೂರ ತಾಲೂಕು ಪಂಚಾಯಿತಿ ಅಖಾಡದಲ್ಲಿ ಉದಯಭಟ್ ಪೂಜಾರಿ ಹೆಸರು ಚರ್ಚೆ!

**ಸತ್ಯಮಿಥ್ಯ ಸುದ್ದಿಮೂಲ ಅಫಜಲಪುರ:** ಮುಂಬರುವ ತಾಲೂಕು ಪಂಚಾಯಿತಿ ಚುನಾವಣೆ ಹಿನ್ನೆಲೆಯಲ್ಲಿ ದೇವಲ ಗಾಣಗಾಪೂರ ಕ್ಷೇತ್ರದಲ್ಲಿ ರಾಜಕೀಯ ಚಟುವಟಿಕೆಗಳು ನಿಧಾನವಾಗಿ ಗರಿಗೆದರತೊಡಗಿವೆ. ಕಾಂಗ್ರೆಸ್ ಪಕ್ಷದ ಪ್ರಬಲ ಆಕಾಂಕ್ಷಿಗಳ ಪೈಕಿ ಉದಯಭಟ್ ಕಾಶಿನಾಥಭಟ್ ಪೂಜಾರಿ ಅವರ ಹೆಸರು ಕೂಡ ಮುನ್ನೆಲೆಗೆ ಬರುತ್ತಿದ್ದು, ಸ್ಥಳೀಯ ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ.



ದೇವಲ ಗಾಣಗಾಪೂರದ ದತ್ತಾತ್ರೇಯ ದೇವಸ್ಥಾನದ ಪ್ರಧಾನ ಅರ್ಚಕರಾಗಿ ಸೇವೆ ಸಲ್ಲಿಸುತ್ತಿರುವ ಉದಯಭಟ್ ಕಾಶಿನಾಥಭಟ್ ಪೂಜಾರಿ ಅವರು ಧಾರ್ಮಿಕ ಸೇವೆಯ ಮೂಲಕ ಜನರೊಂದಿಗೆ ನಿಕಟ ಸಂಪರ್ಕ ಹೊಂದಿದ್ದಾರೆ. ದೇವಸ್ಥಾನಕ್ಕೆ ಆಗಮಿಸುವ ಭಕ್ತರೊಂದಿಗೆ ಆತ್ಮೀಯವಾಗಿ ಬೆರೆಯುವ ಅವರು, ಎಲ್ಲ ಸಮಾಜದ ಜನರೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವುದು ಅವರ ವ್ಯಕ್ತಿತ್ವದ ವಿಶೇಷತೆಯಾಗಿದೆ.

ಧಾರ್ಮಿಕ ಸೇವೆ ಎಂದರೆ ಕೇವಲ ಪೂಜೆ–ಪುನಸ್ಕಾರಗಳಿಗೆ ಸೀಮಿತವಾಗದೆ, ಜನರೊಂದಿಗೆ ಪ್ರೀತಿ, ವಿಶ್ವಾಸ ಮತ್ತು ಸೌಹಾರ್ದತೆಯ ಸಂಬಂಧ ಬೆಳೆಸುವುದೂ ಆಗಿದೆ. ಈ ನಿಟ್ಟಿನಲ್ಲಿ ಉದಯಭಟ್ ಪೂಜಾರಿ ಅವರು ವಿವಿಧ ಸಮಾಜದ ಜನರೊಂದಿಗೆ ಬೆರೆತು, ತಮ್ಮದೇ ಆದ ಪರಿಚಯವನ್ನು ಬೆಳೆಸಿಕೊಂಡಿದ್ದಾರೆ.

ಕೆಕೆಆರ್‌ಟಿಸಿ ನಿಗಮ ಮಂಡಳಿ ಅಧ್ಯಕ್ಷ ಅರುಣ್ ಕುಮಾರ್ ಎಂ.ವೈ. ಪಾಟೀಲ್ ಅವರ ವಲಯದಲ್ಲಿಯೂ ಗುರುತಿಸಿಕೊಂಡಿರುವ ಉದಯಭಟ್ ಪೂಜಾರಿ ಅವರು ಕಾಂಗ್ರೆಸ್ ಪಕ್ಷದ ಪ್ರಬಲ ಆಕಾಂಕ್ಷಿಯಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಧಾರ್ಮಿಕ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸೇವೆಯ ಅನುಭವವನ್ನು ಜನಸೇವೆಯ ಕ್ಷೇತ್ರಕ್ಕೂ ವಿಸ್ತರಿಸುವ ಆಸಕ್ತಿ ಹೊಂದಿರುವ ಅವರ ಹೆಸರು ತಾಲೂಕು ಪಂಚಾಯಿತಿ ಚುನಾವಣೆಯ ಚರ್ಚೆಯಲ್ಲಿ ಕೇಳಿಬರುತ್ತಿದೆ.

ಜನರ ಪ್ರೀತಿ, ಸಮಾಜದೊಂದಿಗಿನ ಬಾಂಧವ್ಯ, ಧಾರ್ಮಿಕ ಸೇವೆಯ ಅನುಭವ. ಇವೇ ರಾಜಕೀಯ ಪಯಣಕ್ಕೆ ಪ್ರೇರಣೆಯಾಗಲಿವೆಯೇ? ಎಂಬ ಪ್ರಶ್ನೆ ಇದೀಗ ಸ್ಥಳೀಯ ವಲಯದಲ್ಲಿ ಕುತೂಹಲ ಮೂಡಿಸಿದೆ. ಒಟ್ಟಿನಲ್ಲಿ, ದೇವಲ ಗಾಣಗಾಪೂರ ತಾಲೂಕು ಪಂಚಾಯಿತಿ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಪ್ರಬಲ ಆಕಾಂಕ್ಷಿಗಳ ಪೈಕಿ ಉದಯಭಟ್ ಕಾಶಿನಾಥಭಟ್ ಪೂಜಾರಿ ಅವರ ಹೆಸರೂ ಚರ್ಚೆಯಲ್ಲಿದೆ. ಅಂತಿಮವಾಗಿ ಪಕ್ಷದ ಟಿಕೆಟ್ ಯಾರಿಗೆ ದೊರೆಯಲಿದೆ ಎಂಬುದನ್ನು ಕಾದುನೋಡಬೇಕಿದೆ.

## ಮಾಹಿತಿ ನೀಡದ, ವಿಚಾರಣೆಗೆ ಹಾಜರಾಗದ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ದಂಡ

**ಸತ್ಯಮಿಥ್ಯ ಸುದ್ದಿಮೂಲ ಕೊಪ್ಪಳ :** ಸಕಾಲಕ್ಕೆ ಮಾಹಿತಿ ನೀಡಲು ಹಾಗೂ ವಿಚಾರಣೆಗೆ ಹಾಜರಾಗದೆ ನಿರ್ಲಕ್ಷ್ಯ ವಹಿಸಿದ ವಿವಿಧ ಸಾರ್ವಜನಿಕ ಪ್ರಾಧಿಕಾರದ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ. ಕರ್ನಾಟಕ ಮಾಹಿತಿ ಆಯೋಗ ಕಲಬುರಗಿ ಪೀಠ ದಂಡ ವಿಧಿಸಿ ಆದೇಶ ಮಾಡಿದೆ.



ಮೇಲ್ಮನವಿದಾರರು ಮಾಹಿತಿ ಕೋರಿ ಅರ್ಜಿ ಸಲ್ಲಿಸಿದ್ದು, ಅವರಿಗೆ ಪ್ರತಿವಾದಿಗಳು ಸಕಾಲಕ್ಕೆ ಮಾಹಿತಿ ನೀಡದ ಕಾರಣ ಮೇಲ್ಮನವಿದಾರ ಕರ್ನಾಟಕ ಮಾಹಿತಿ ಆಯೋಗ ಕಲಬುರಗಿ ಪೀಠದ ಮುಂದೆ ಸಲ್ಲಿಸಿದ ದ್ವಿತೀಯ ಮೇಲ್ಮನವಿಯ ವಿಚಾರಣೆ ನಡೆಸಿದ ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತ ಬಿ.ವೆಂಕಟ ಸಿಂಗ್ ಐವರು ಅಧಿಕಾರಿಗಳಿಗೆ ತಲಾ 10 ಸಾವಿರದಂತೆ ಒಟ್ಟು 50 ಸಾವಿರ ದಂಡ ವಿಧಿಸಿ ಆದೇಶ ಮಾಡಿದ್ದಾರೆ.

ರಾಯಚೂರು ತಾಲೂಕಿನ ಮೇಲ್ಮನವಿದಾರರಿಗೆ ಮಾಹಿತಿ ನೀಡಿ, ಅವರಿಗೆ ನೀಡಿದ ಮಾಹಿತಿ ಮತ್ತು ಸ್ವೀಕೃತಿ ಪತ್ರಿಯನ್ನು ಆಯೋಗಕ್ಕೆ ಸಲ್ಲಿಸುವಂತೆ ಆಯೋಗ ಮಾಡಿದ ಆದೇಶ ಪಾಲನೆ ಮಾಡದೆ ನಿರ್ಲಕ್ಷ್ಯ ಮಾಡಿದ ಕಾರಣ ಈ ಹಿಂದೆ ಬಸವಕಲ್ಯಾಣ ನಗರಸಭೆ ಪ್ರಥಮ ದರ್ಜೆ ಸಹಾಯಕರಾಗಿದ್ದ ಸೂರ್ಯಕಾಂತಗೆ ಬೋಳಮಾನದೊಡ್ಡಿ ಗ್ರಾಮ ಪಂಚಾಯತ ಕಾರ್ಯದರ್ಶಿ ಮಲ್ಲಿಕಾರ್ಜುನಗೆ 10 ಸಾವಿರ, ಕಲಬುರಗಿ ಪಾಲಿಕೆ ಪರಿಸರ ಅಭಿಯಂತ ಅಭಯಕುಮಾರಗೆ 10 ಸಾವಿರ, ಕುಷ್ಟಗಿ ತಾಲೂಕಿನ ಜುಮ್ಮಾಪೂರ ಗ್ರಾಮ ಪಂಚಾಯತ್ ಕಾರ್ಯದರ್ಶಿ ಗುರಪ್ಪ ನಾಯಕಗೆ 10 ಸಾವಿರ ಹಾಗೂ ಹೊಸಪೇಟೆ ತಾಲೂಕಿನ ನಾಗಲಾಪುರ ಗ್ರಾಮ ಪಂಚಾಯತ್ ಕಾರ್ಯದರ್ಶಿ ರವಿಕುಮಾರಗೆ 10 ಸಾವಿರ ದಂಡ ವಿಧಿಸಿ ಆದೇಶ ಮಾಡಲಾಗಿದೆ.

ಪ್ರತಿವಾದಿ ಅಧಿಕಾರಿಗಳಿಗೆ ವಿಧಿಸಿದ ದಂಡ ಅವರ ಬರುವ ತಿಂಗಳ ವೇತನದಲ್ಲಿ ಕಡಿತಗೊಳಿಸಿ ಆಯೋಗ ಸೂಚಿಸಿದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿ ರಶೀದಿ ಆಯೋಗ–ಕ್ಕೆ ಸಲ್ಲಿಸಲು ಅನುಕ್ರಮವಾಗಿ ದ ಂ ಡ ನ ಗ ೂ ಳ ಪ ಟ್ಟ ವ ೀ ಲಾ ಧಿ ಕಾ ರಿ ಗ ಳಿ ಗ ಆಯೋಗ ಆದೇಶ ಮಾಡಿದೆ.

ಆಯೋಗದ ಆದೇಶದಂತೆ ದಂಡ ಪಾವತಿ ಮಾಡಬೇಕು ಹಾಗೂ ಆಯೋಗದ ಆದೇಶ ತಲುಪಿದ ತಕ್ಷಣವೇ ಮೇಲ್ಮನವಿದಾರರಿಗೆ ಮಾಹಿತಿ ನೀಡಿ ಅದರ ಪ್ರತಿ ಮತ್ತು ಸ್ವೀಕೃತಿ ಪತ್ರ ಆಯೋಗಕ್ಕೆ ಸಲ್ಲಿಸಿ ಮುಂದಿನ ವಿಚಾರಣೆಗೆ ಹಾಜರಾಗುವಂತೆ ಪ್ರತಿವಾದಿ ಅಧಿಕಾರಿಗಳಿಗೆ ಮಾಹಿತಿ ಹಕ್ಕು ಅಧಿನಿಯಮ 2005 ರ 18 (3) ರಡಿ ಆದೇಶಿಸಿ, ತಪ್ಪಿದಲ್ಲಿ ಮಾಹಿತಿ ಹಕ್ಕು ಅಧಿನಿಯಮ 2005 ರ 20 (2) ರಡಿ ಎಚ್ಚರಿಕೆ ನೀಡಿದೆ. ಹಾಗೂ ಪ್ರತಿವಾದಿಗಳ ಪ್ರಥಮ ಮೇಲ್ಮನವಿ ಪ್ರಾಧಿಕಾರದ ಅಧಿಕಾರಿಗಳು ಈ ಕುರಿತು ಕ್ರಮ ವಹಿಸಲು ಸೂಚನೆ ನೀಡಿತಪ್ಪಿದಲ್ಲಿಶಿಸ್ತುಕ್ರಮಕ್ಕೆಶಿಫಾರಸ್ಸುಮಾಡುವುದಾಗಿ ಎಚ್ಚರಿಕೆ ನೀಡಿದೆ.

## ಯುವ ಸಂಸತ್ ಕಾರ್ಯಕ್ರಮ: ಪಾರದರ್ಶಕ ಆಯ್ಕೆ, ಮೌಲ್ಯಮಾಪನಕ್ಕೆ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಕರೆ

**ಗದಗ:** ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ–ಯ ಹಿನ್ನೆಲೆಯಲ್ಲಿ ಯುವ ಸಂಸತ್ ಕಾರ್ಯಕ್ರಮದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಸಂಸದೀಯ ನಡವಳಿಕೆ, ವಿಧಾನಸಭೆ ಮತ್ತು ಸಂಸತ್ತಿನ ಕಾರ್ಯಕಲಾಪಗಳ ಬಗ್ಗೆ ಸ್ಪಷ್ಟ ಅರಿವು ಇರಬೇಕು. ಯಾವುದೇ ರೀತಿಯ ತಾರತಮ್ಯಕ್ಕೆ ಆಸ್ಪದ ನೀಡದೆ, ಪಾರದರ್ಶಕವಾಗಿ ಚೀಟಿ ಎತ್ತುವ ಮೂಲಕವೇ ಪ್ರಮುಖ ಪಾತ್ರಗಳನ್ನು (ಆಡಳಿತ ಪಕ್ಷ, ವಿರೋಧ ಪಕ್ಷ, ಮಾರ್ಷಲ್ ಇತ್ಯಾದಿ) ಹಂಚಿಕೆ ಮಾಡಬೇಕು. ಇದರಿಂದ ಪ್ರತಿಯೊಬ್ಬ ವಿದ್ಯಾರ್ಥಿಗೂ ಸಮಾನ ಅವಕಾಶ ಸಿಗುತ್ತದೆ" ಎಂದು ಜಿಲ್ಲಾಧಿಕಾರಿ ಸಿ. ಎನ್. ಶ್ರೀಧರ ತಿಳಿಸಿದರು.



ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಅಕ್ಟೋಬರ್ (9) ರಂದು ಜರುಗಿದ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಹಿನ್ನೆಲೆಯಲ್ಲಿ ಜಿಲ್ಲಾ ಮಟ್ಟದ ಯುವ ಸಂಸತ್ತು ಕಾರ್ಯಕ್ರಮ ಪೂರ್ವ ಸಿದ್ಧತೆ ಕುರಿತು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿದ್ಯಾರ್ಥಿಗಳ ಪ್ರಸ್ತುತಿ, ವಿಷಯ ಮಂಡನೆ ಮತ್ತು ಸಕ್ರಿಯ ಭಾಗವಹಿಸುವಿಕೆಯನ್ನು ನಿಖರವಾಗಿ ಮೌಲ್ಯಮಾಪನ ಮಾಡಲು ಉಪನ್ಯಾಸಕರು ಹಾಗೂ ಸಮಿತಿಯ ಸದಸ್ಯರನ್ನೊಳಗೊಂಡ ತಜ್ಞರ ಮೌಲ್ಯಮಾಪನ ತಂಡವನ್ನು ರಚಿಸಬೇಕು. ಈ ತಂಡವು ಕಲಾಪವನ್ನು ನಿಗಾವಹಿಸಿ ಅತ್ಯುತ್ತಮವಾಗಿ ಪ್ರದರ್ಶನ ನೀಡುವ ವಿದ್ಯಾರ್ಥಿಗಳನ್ನು ಜಿಲ್ಲಾ ಮಟ್ಟದಿಂದ ಮುಂದಿನ ಹಂತಕ್ಕೆ ಆಯ್ಕೆ ಮಾಡಲಿದೆ" ಎಂದರು.

ಅದಲ್ಲದೆ, "ನೈಜ ಶಾಸಕರಂತೆ ವಿದ್ಯಾರ್ಥಿಗಳು ಕಲಾಪದಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಮುಂಚಿತವಾಗಿಯೇ ಸೂಕ್ತ ತರಬೇತಿ ಹಾಗೂ 'ಅಭ್ಯಾಸ ಕಲಾಪ' ನಡೆಸುವುದು ಅತ್ಯಗತ್ಯ. ಚರ್ಚೆಗೆ ನೀಡುವ ವಿಷಯಗಳು ವಿದ್ಯಾರ್ಥಿಗಳ ವಯಸ್ಸಿಗೆ ಹಾಗೂ ಜ್ಞಾನಕ್ಕೆ ಸೂಕ್ತವಾಗಿರಬೇಕು" ಎಂದರು.

ಪಾರದರ್ಶಕ ಪಾತ್ರ ಹಂಚಿಕೆ : ವಿದ್ಯಾರ್ಥಿಗಳನ್ನು ಲಾಟರಿ/ಚೀಟಿ ಎತ್ತುವ ಮೂಲಕ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳಾಗಿ ವಿಂಗಡಿಸುವುದು. ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರೇ ಚರ್ಚಿಸಿ ತಮ್ಮ ನಾಯಕರನ್ನು (ಸಿಎಂ, ವಿರೋಧ ಪಕ್ಷದ ನಾಯಕ ಇತ್ಯಾದಿ) ಪ್ರಜಾಸತ್ತಾತ್ಮಕವಾಗಿ ಆಯ್ಕೆ ಮಾಡಿಕೊಳ್ಳುವುದು ಎಂದು ನಿರ್ದೇಶನ ನೀಡಿದರು.

ಕಲಾಪದಲ್ಲಿ ಭಾಗವಹಿಸುವ ಪ್ರತಿಯೊಬ್ಬ ವಿದ್ಯಾರ್ಥಿಯ ವಿಷಯ ಮಂಡನೆ, ಹಾವಭಾವ ಹಾಗೂ ಸಕ್ರಿಯತೆಯನ್ನು ಗಮನಿಸಿ ಅಂಕ ನೀಡಲು ತಜ್ಞ ಉಪನ್ಯಾಸಕರು ಮತ್ತು ಸಮಿತಿ ಸದಸ್ಯರನ್ನೊಳಗೊಂಡ ವಿಶೇಷ ಮೌಲ್ಯಮಾಪನ ತಂಡವನ್ನು ರಚಿಸಲಾಗುತ್ತದೆ ಎಂದು ಹೇಳಿದರು.

ಅಂತಿಮ ಕಾರ್ಯಕ್ರಮಕ್ಕೂ ಮುನ್ನ ಓರಿಯಂಟೇಶನ್ ತರಬೇತಿ ಮತ್ತು ಅಭ್ಯಾಸ ಕಲಾಪಗಳನ್ನು ನಡೆಸಲಾಗುತ್ತದೆ.

ವಿದ್ಯಾರ್ಥಿಗಳಲ್ಲಿ ಸಾರ್ವಜನಿಕ ನೀತಿ ಹಾಗೂ ಸಂಸದೀಯ ವ್ಯವಸ್ಥೆಯ ಅರಿವು ಮೂಡಿಸಲು ವಿವಾದಾತ್ಮಕವಲ್ಲದ ಪ್ರಚಲಿತ ವಿಷಯಗಳನ್ನು ಚರ್ಚೆಗೆ ನೀಡಲಾಗುತ್ತದೆ ಎಂದು ಜಿಲ್ಲಾಧಿಕಾರಿ ಸಿ. ಎನ್. ಶ್ರೀಧರ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮುಕುಲ್ ಜೈನ್ ಅವರು ಮಾತನಾಡಿ, "ಯುವ ಸಂಸತ್ ಕಾರ್ಯಕ್ರಮದ ರೂಪುರೇಷೆಗಳ ಬಗ್ಗೆ ವಿವರಿಸಿ, ಡಿಗ್ರಿ, ಸ್ನಾತ–ಕೋತ್ತರ ಹಾಗೂ ಕಾನೂನು ಕಾಲೇಜುಗಳ ವಿದ್ಯಾರ್ಥಿಗಳಿಗೆ ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ನೈಜ ವಿಧಾನ ಸೌಧದ ವಾತಾವರಣವನ್ನು ಮರುಸೃಷ್ಟಿಸಲು ಸೂಕ್ತವಾದ ಸಭಾಂಗಣ, ಸ್ಪೀಕರ್ ಆಸನ, ಮಾಧ್ಯಮ ಗ್ಯಾಲರಿ ಹಾಗೂ ಪ್ರೇಕ್ಷಕರ ಗ್ಯಾಲರಿಗಳನ್ನು ವ್ಯವಸ್ಥೆಗೊಳಿಸಲಾಗುವುದು" ಎಂದು ಸಭೆಯಲ್ಲಿ ತಿಳಿಸಿದರು.

ನ್ಯಾಯವಾದಿ ಗುರುರಾಜ ಅವರು ಮಾತನಾಡಿ, ಯುವ ಸಂಸತ್‌ನಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಶಾಸನ ರಚನೆ, ಜೀರೋ ಅವರ್ (ಶೂನ್ಯ ವೇಳೆ) ಹಾಗೂ ಸಂಸದೀಯ ನಿಯಮಗಳ ಕುರಿತು ನೀಡಬೇಕಾದ ಪೂರ್ವ ತರಬೇತಿಯ ಅಗತ್ಯತೆಯನ್ನು ಹಂಚಿಕೊಂಡರು.

ಯಾವುದೇ ವಿದ್ಯಾರ್ಥಿಗೆ ನೇರವಾಗಿ ಪ್ರಮುಖ ಪಾತ್ರಗಳನ್ನು (ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕ, ಸ್ಪೀಕರ್ ಇತ್ಯಾದಿ) ನೀಡದೆ, ಚೀಟಿ ಎತ್ತುವ ಮೂಲಕ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳನ್ನು ವಿಂಗಡಿಸುವುದು. ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರೇ ಚರ್ಚಿಸಿ ತಮ್ಮ ನಾಯಕರನ್ನು ಪ್ರಜಾಸತ್ತಾತ್ಮಕವಾಗಿ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡುವುದು ಎಂದರು.

ವಿದ್ಯಾರ್ಥಿಗಳಪ್ರಾತಿನಿಧ್ಯತೆಯಲ್ಲಿಶಾಲಾಹಂತದಲ್ಲಿ(8–10%), ಪ್ರೌಢಶಾಲೆ (10–15%), ಪದವಿ ವಿದ್ಯಾರ್ಥಿಗಳು (50–60%) ಹಾಗೂ ಕಾನೂನು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ (25–30%) ಕಾರ್ಯಕ್ರಮದಲ್ಲಿ ಭಾಗವಹಿಸಲು ನಿಗದಿತ ಅನುಪಾತದಲ್ಲಿ ಅವಕಾಶ ನೀಡಲಾಗುವುದು. ವಿಧಾನ ಸೌಧದ ಕಲಾಪದ ಮಾದರಿಯಲ್ಲೇ ಸ್ಪೀಕರ್ ಪೀಠ, ಆಡಳಿತ–ವಿರೋಧ ಪಕ್ಷಗಳ ಆಸನ ವ್ಯವಸ್ಥೆ, ಮಾರ್ಷಲ್‌ಗಳು, ಸಚಿವಾಲಯದ ಸಿಬ್ಬಂದಿ, ಮಾಧ್ಯಮ ಗ್ಯಾಲರಿ ಹಾಗೂ ಸಾರ್ವಜನಿಕ ಪ್ರೇಕ್ಷಕರ ಗ್ಯಾಲರಿಯನ್ನು ಸಜ್ಜುಗೊಳಿಸಲಾಗುತ್ತದೆ ಎಂದು ಹೇಳಿದರು.

ತರಬೇತಿ ಮತ್ತು ವಿಷಯಗಳು ಕಾರ್ಯಕ್ರಮಕ್ಕೂ ಮುನ್ನ ವಿದ್ಯಾರ್ಥಿಗಳಿಗೆ ಸಂಸದೀಯ ನಡಾವಳಿ ಹಾಗೂ ಜೀರೋ ಅವರ್ ಕುರಿತು ತರಬೇತಿ ನೀಡಲಾಗುವುದು. ರಿಹರ್ಸಲ್ ಮತ್ತು ಅಂತಿಮ ದಿನದ ಕಲಾಪಕ್ಕೆ ಬೇರೆ ಬೇರೆ ಪ್ರಚಲಿತ ವಿಷಯಗಳನ್ನು (ಉದಾ: ಪರಿಸರ ಸಂರಕ್ಷಣೆ, ಡಿಜಿಟಲ್ ಗೌಪ್ಯತೆ/ಸೈಬರ್ ಭದ್ರತೆ, ಅಭಿವೃದ್ಧಿ ಯೋಜನೆಗಳು, ಕೃತಕ ಬುದ್ಧಿಮತ್ತೆ ಇತ್ಯಾದಿ ) ಚರ್ಚೆಗೆ ನಿಗದಿಪಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಈ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ. ಆರ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕಿ ಶ್ರೀಮತಿ ಡಾ. ನಂದಾ ಹಣಬರಹಟ್ಟಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಆರ್. ಎಸ್. ಬುರಡಿ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಮಾಸನಾಯಕ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

## ಮೈಸೂರು ದಸರಾ ಉದ್ಘಾಟನೆ: ಶ್ರೀ ಸಿದ್ದಲಿಂಗ ದೇವರಿಗೆ ಸರ್ಕಾರದಿಂದ ಅಧಿಕೃತ ಆಮಂತ್ರಣ



**ಸತ್ಯಮಿಥ್ಯ ಸುದ್ದಿಮೂಲ ಮುದ್ದೇಬಿಹಾಳ:** ವಿಶ್ವ ವಿಖ್ಯಾತ ನಾಡಹಬ್ಬ ಮೈಸೂರು ದಸರಾ ಉತ್ಸವವು ಅಕ್ಟೋಬರ್ 11 ರಿಂದ ಅಕ್ಟೋಬರ್ 21ರ ವರೆಗೆ ನಡೆಯಲಿದ್ದು, ಈ ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರವು ವಿಜೃಂಭಣೆಯಿಂದ ಆಚರಿಸುತ್ತಾ ಬಂದಿದೆ.

ಈ ವರ್ಷವಾದ 2026 ರಲ್ಲಿ ನಡೆಯುವ ಮೈಸೂರು ದಸರಾ ಕಾರ್ಯಕ್ರಮದಲ್ಲಿ ಭಾಗವಹಿಸಲು ವಿಜಯಪುರ ಜಿಲ್ಲೆಯ ತಾಳಿಕೋಟಿಯ ಶ್ರೀ ಖಾಸ್ಗತೇಶ್ವರ ಮಠದ ಪರಮ ಪೂಜ್ಯರಾದ ಶ್ರೀ ಸಿದ್ದಲಿಂಗ ದೇವರಿಗೆ ಅಧಿಕೃತವಾಗಿ ಆಮಂತ್ರಣ ಪತ್ರವನ್ನು ತಲುಪಿಸಲಾಗಿದೆ.

ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು ಹಾಗೂ ಕೊಪ್ಪಳ ಜಿಲ್ಲೆಯ ಉಸ್ತುವಾರಿ ಸಚಿವರಾದ ಶಿವರಾಜ ಎಸ್. ತಂಗಡಗಿ ಅವರು ಆಮಂತ್ರಣ ಪತ್ರವನ್ನು ನೀಡಿದ್ದಾರೆ. ಮೈಸೂರಿನ ಚಾಮುಂಡಿ ಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಿ ಸನ್ನಿಧಿಯಲ್ಲಿ ಅಕ್ಟೋಬರ್ 11 ಭಾನುವಾರ ಬೆಳಿಗ್ಗೆ 11.50ಕ್ಕೆ ಅಗ್ನಿಪೂಜೆಯೊಂದಿಗೆ ನಡೆಯುವ ಉದ್ಘಾಟನೆ ಕಾರ್ಯಕ್ರಮದಲ್ಲಿ ತಾವುಗಳು ಭಾಗವಹಿಸಬೇಕೆಂದು ಶ್ರೀ ಸಿದ್ಧಲಿಂಗ ದೇವರಿಗೆ ವಿನಂತಿಸಿ ಆಮಂತ್ರಣ ಪತ್ರ ತಲುಪಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

## ಅಂತರ ಜಿಲ್ಲಾ ಕಳ್ಳರ ಗ್ಯಾಂಗ್ ಬಂಧನ

**ಸತ್ಯಮಿಥ್ಯ ಸುದ್ದಿಮೂಲ ಸಿದ್ದಾಪುರ:** ತಾಲೂಕಿನಲ್ಲಿ ಸರಣಿ ಕಳ್ಳತನ ಮಾಡಲು ಬಂದಿದ್ದ ಅಂತರ ಜಿಲ್ಲಾ ಕಳ್ಳರ ಗ್ಯಾಂಗ್ ಒಂದನ್ನು ಸಿದ್ದಾಪುರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಸಿದ್ದಾಪುರದ ಹಾಳದಕಟ್ಟಾದಲ್ಲಿರುವ ರಾಜು ಉಮೇಶ ಜಾಧವ ಅವರ ಮನೆಯಲ್ಲಿ ಯಾರೂ ಇಲ್ಲದಾಗ ಬೀಗ ಮುರಿದು ಒಳನುಗ್ಗಿ ಕಳ್ಳತನ ನಡೆಸಿರುವುದಾಗಿ ಸೋಮವಾರ ದೂರು ನೀಡಿದ್ದರು.



ತಕ್ಷಣ ಕಾರ್ಯಪ್ರವೃತ್ತರಾದ ಸಿದ್ದಾಪುರ ಇನ್ಸೆಕ್ಟರ್ ಜೆ.ಬಿ.ಸೀತಾರಾಮ ಹಾಗೂ ಪಿಎಸ್ಐ ನಾಗಪ್ಪ ಅವರ ತಂಡ ಕಾರ್ಯಾಚರಣೆ ನಡೆಸಿ, ಮೂವರನ್ನು ಬಂಧಿಸಿದೆ.

ಗದಗ ಜಿಲ್ಲೆ ಲಕ್ಷ್ಮೇಶ್ವರದ ಗೋವಿಂದಪ್ಪ ತೋಳೆಪ್ಪ, ಬೆಳಗಾವಿ ರಾಯಬಾಗದ ಚಿಂಚಲಿಯ ಕೃಷ್ಣ ಮುಳಗುಂದ, ಹುಬ್ಬಳ್ಳಿ ತಾರೆಹಾಳ ರಸ್ತೆಯ ಗಣೇಶ ಗಂಗಪ್ಪ ಬಂಧಿತರು

.ರಾಯಬಾಗಚಿಂಚಲಿಯಗಂಗಪ್ಪಯಲ್ಲಪ್ಪಕುಂಚಿಕೊರವ ಹಾಗೂ ಮಂಜು ಖಂಡು ವಡ್ಡರ್ ತಪ್ಪಿಸಿಕೊಂಡಿದ್ದಾರೆ. ಬಂಧಿತರಿಂದ ಸ್ವಿಪ್ಟ್ ಡಿಸೈರ್ ಕಾರು ಹಾಗೂ ಸ್ವಲ್ಪ ಹಣ ವಶಕ್ಕೆ ಪಡೆಯಲಾಗಿದೆ. ಅವರ ವಿರುದ್ಧ ಗದಗ, ಧಾರವಾಡ ಉಡುಪಿಯಲ್ಲಿ ದರೋಡೆ, ಡಕಾಯಿತಿ ಮನೆ ಕಳ್ಳತನ ಪ್ರಕರಣಗಳಿವೆ.

# ಮಾನವ ದಿನಗಳ ಸೃಜನೆ ಮಾಡದಿದ್ದರೇ ಶಿಸ್ತು ಕ್ರಮ: ಜಿಪಂ ಸಿಇಒ ಜೈನ್

**ಸತ್ಯಮಿಥ್ಯ ಸುದ್ದಿಮೂಲ ರೋಣ**
ತಾಲೂಕಿನಲ್ಲಿ ಮಾನವ ದಿನಗಳ ಸೃಜನೆ ತುಂಬಾ ಕಡಿಮೆ ಇದೆ, ಮಾನವ ದಿನಗಳ ಸೃಜನೆಗೆ ಒತ್ತು ಕೊಟ್ಟು ಜನರಿಗೆ ಕೆಲಸ ಕೊಡದಿದ್ದರೆ ಶಿಸ್ತು ಕ್ರಮ ಕೈಗೊಳ್ಳಬೇಕಾಗುತ್ತದೆ ಅಂತಾ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಮುಕುಲ್ ಜೈನ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಹಾಗೂ ವಿಬಿಜಿ–ರಾಮ್–ಜಿ ಸಿಬ್ಬಂದಿಗಳಿಗೆ ಕಟ್ಟು ನಿಟ್ಟಿನ ಸೂಚನೆ ನೀಡಿದರು...

ತಾಲೂಕ ಪಂಚಾಯತ ಸಭಾ ಭವನದಲ್ಲಿ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿದ ಅವರು ವಿಬಿಜಿ–ರಾಮ್–ಜಿ ಯೋಜನೆಯಡಿಯಲ್ಲಿ 125 ದಿನಗಳು ಜನರಿಗೆ ಕೆಲಸ ಕೊಡಲು ಸಾಕಷ್ಟು ಅವಕಾಶಗಳು ಇವೆ, ಏಕೆ ನೀವು ಆ ಅವಕಾಶಗಳನ್ನು ಜನರಿಗೆ ತಲುಪಿಸುತ್ತಿಲ್ಲಾ, ಯಾವುದೇ ನೆಪಗಳನ್ನು ಹೇಳದೇ ಜನರಿಗೆ ಕೆಲಸ ಒದಗಿಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ ಈ ಹಿನ್ನೆಲೆ ಪ್ರತಿಯೊಂದು ಗ್ರಾಮ ಪಂಚಾಯತಿ ಮಟ್ಟದಲ್ಲಿ ಈ ಯೋಜನೆಯಡಿಯಲ್ಲಿ ಕೆಲಸ ಕೊಡಬೇಕು ಇಲ್ಲದೆ ಹೋದರೆ ಶಿಸ್ತು ಕ್ರಮ ಕೈಗೊಳ್ಳಲಾಗುವದು ಎಂದರು..

ಇನ್ನು ಕೆಲಸ ಕೊಡದೇ ಇರಲು ಕಾರಣಗಳನ್ನು ಎನು? ಯಾಕೆ? ಎಂದು ಕೆಲವು ಪಿಡಿಓ ಗಳನ್ನು ನಿಲ್ಲಿಸಿ ವಿಷಯ ಕೇಳಿದ ಅವರು, ಸಾಮೂಹಿಕ ಕಾಮಗಾರಿಗಳು ತಮ್ಮ ಗ್ರಾಮ ಪಂಚಾಯತಿ ಕ್ರಿಯಾ ಯೋಜನೆಯಲ್ಲಿ ಇಲ್ಲದೇ ಹೋದರೆ ಕಾಮಗಾರಿ ಗಳನ್ನು ಗುರುತಿಸಿ ಹೆಚ್ಚುವರಿ ಕ್ರಿಯಾ ಯೋಜನೆಯನ್ನು ತಯಾರಿಸಿ ಕೊಡಿ, ಅದಕ್ಕೆ ಅನುಮೋದನೆ ದೊರೆತ ಕೂಡಲೇ ಕೆಲಸವನ್ನು ಪ್ರಾರಂಭಿಸಲು ಸೂಚನೆ ನೀಡಿದರು..

ಪಂಚಾಯತ ರಾಜ್ ಇಲಾಖೆ ಇಂಜನಿಯರ ಪುರೋಹಿತ ಅವರಿಗೆ ಗ್ರಾಮ ಪಂಚಾಯತಿ ನೂತನ ಕಟ್ಟಡ ವಿಚಾರವಾಗಿ ಎಸ್ಟಿಮೇಟ್ ತಯಾರಿಸದ ಹಿನ್ನೆಲೆ ಇಲ್ಲ ಸಲ್ಲದ ಕಾರಣ ಹೇಳದೇ ನೀತಿ ಸಂಹಿತೆ ಬಳಿಕ ಟೆಂಡರ್ ಕರೆದು ಕೆಲಸ ಪ್ರಾರಂಭಿಸಲು ಗರಂ ಆದರು, ಇನ್ನು ಮಲ್ಲಾಪೂರ ಗ್ರಾಮದಲ್ಲಿ ಕೆಲಸ ಕೊಡದೇ ಇರುವ ಪಿಡಿಓ ಲಕ್ಷ್ಮೀ ಗೋಡಿ ಅವರಿಗೆ ಕಾರಣ ಕೇಳಿದ ಅವರು ನೀವು ಬಂದಾಗಿನಿಂದ 0% ಮಾನವ ದಿನಗಳು ಸೃಜನೆ ಆಗಿವೆ ಅಂತಾ ಗರಂ ಆದರು ಗ್ರಾಮ ಪಂಚಾಯತಿ ಮಟ್ಟದಲ್ಲಿ ಗ್ರಾಮ ಸಭೆಗಳನ್ನು ( ನಿತಿಸಂಹಿತೆ ) ಮುಗಿದ ಬಳಿಕ ನಿಯಮಾನುಸಾರ ಮಾಡಿ ಪಂಚತಂತ್ರದಲ್ಲಿ ಅಳವಡಿಸಲು ಸೂಚಿಸಿದರು...

ಇನ್ನು ಸ್ವಚ್ಛ ಭಾರತ ಮಷಿನ್ ಅಡಿ ಎಲ್ಲಾ ಗ್ರಾಮ ಪಂಚಾಯತಿ ಯಲ್ಲಿ ಖಘಾಓ ಘಟಕ ಇರಲೇ ಬೇಕು ಯಾವ ಗ್ರಾಮ ಪಂಚಾಯತಿ ಯಲ್ಲಿ ಇಲ್ಲಾ ಅದನ್ನು ಹೆಚ್ಚುವರಿ ಕ್ರೀಯಾ ಯೋಜನೆಯಡಿಯಲ್ಲಿ ಅಳವಡಿಸಿ ಕೊಡಲು ತಿಳಿಸಿದರು. ಖಘಾಓ ವಾಹನಕ್ಕೆ ಪ್ರತಿ ಗ್ರಾಮದಲ್ಲಿ ಮಹಿಳಾ ಚಾಲಕರು ಇರಬೇಕು ಇಲ್ಲದಿದ್ದರೆ ಕೂಡಲೇ ತೆಗದುಕೊಳ್ಳಲು ಸೂಚಿಸಿದರು. ಇನ್ನುಳಿದ ವಿಷಯಗಳ ಕುರಿತು ಪರಿಶೀಲನೆ ನಡೆಸಿದ ಅವರು ಸಂಜೀವಿನಿ ಯೋಜನೆ, ಹೌಸಿಂಗ್, ಃಖಖ, ವಸತಿ ಯೋಜನೆ, ಸಕಾಲ ಸೇರಿದಂತೆ ಹಲವು ವಿಷಯಗಳ ಕುರಿತು ಪ್ರಗತಿ ಪರಿಶೀಲನೆ ನಡೆಸಿ ಒಂದು ವಾರದ ಒಳಗೆ ಪ್ರಗತಿ ಸಾಧಿಸಲು ಸೂಚನೆ ನೀಡಿದರು. ಕಾರ್ಯಕ್ರಮ ವನ್ನು ಸಹಾಯಕ ನಿರ್ದೇಶಕರಾದ (ಪಂಚಾಯತ ರಾಜ್) ಶಿವನಗೌಡ ಮೆಣಸಗಿ ಸ್ವಾಗತಿಸಿ ವಂದಿಸಿದರು, ಈ ಸಂದರ್ಭದಲ್ಲಿ ಮಾನ್ಯ ಉಪ ಕಾರ್ಯದರ್ಶಿಗಳಾದ ಸಿ, ಆರ್ ಮುಂಡರಗಿ,ಜಿಲ್ಲಾ ಯೋಜನಾ ನಿರ್ದೇಶಕರಾದ ಎಂ,ವ್ಹಿ, ಚಳಗೇರಿ, ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಚಂದ್ರಶೇಖರ ಬಿ ಕಂದಕೂರ, ತಾಲೂಕ ಪಂಚಾಯತ ಸಹಾಯಕ ಲೆಕ್ಕಾಧಿಕಾರಿಗಳಾದ ದೇವರಾಜ್ ಸಜ್ಜನಶೆಟ್ಟರ, ತಾಲೂಕ ಯೋಜನಾಧಿಕಾರಿಗಳಾದ ಸಿ.ಎಸ್ ನಿಲಗುಂದ ತಾಲೂಕಿನ ಎಲ್ಲಾ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿಗಳು, ಜಿಲ್ಲಾ ಮಾಹಿತಿ ಶಿಕ್ಷಣ ಸಂವಹನ ಅಧಿಕಾರಿಗಳು ಸೇರಿದಂತೆ, ತಾಲೂಕ ವಿಬಿಜಿ–ರಾಮ್–ಜಿ ಸಿಬ್ಬಂದಿಗಳು, ಗ್ರಾಮ ಪಂಚಾಯತಿ ಸಿಬ್ಬಂದಿಗಳು ಸೇರಿದಂತೆ ಗ್ರಾಮಸ್ಥರು ಕೂಲಿ ಕಾರ್ಮಿಕರು ಹಾಜರಿದ್ದರು.

## ಕೆರೆ ಪುನಶ್ಚೇತನ ಕಾಮಗಾರಿ ವೀಕ್ಷಣೆ

**ರೋಣ ತಾಲೂಕಿನ ಹೊಸಳ್ಳಿ ಗ್ರಾಮ ಪಂಚಾಯತಿಯ ಕೆರೆ ಪುನಶ್ಚೇತನ ಕಾಮಗಾರಿ ವಿಕ್ಷಣೆ ಮಾಡಿದರು ಈ ಸಂದರ್ಭದಲ್ಲಿ ವಿಬಿಜಿ–ರಾಮ್–ಜಿ ಕೂಲಿ ಕಾರ್ಮಿಕರು ಹೂಗುಚ್ಚ ನೀಡುವ ಮೂಲಕ ಸಿಇಓ ಅವರನ್ನು ಸ್ವಾಗತಿಸಿದರು, ಬಳಿಕ ಕೂಲಿ ಕಾರ್ಮಿಕರೊಂದಿಗೆ ಮಾನ್ಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಕುಂದು ಕೊರತೆಗಳನ್ನು ಆಲಿಸಿದರು, ಜೊತೆ–ಗೆ ನಿರಂತರ ಕೆಲಸದ ಬೇಡಿಕೆ ಈಡೇರಿಕೆಗೆ ಗ್ರಾಮಸ್ಥರು ಆಗ್ರಹಿಸಿದರು. ನಿರಂತರವಾಗಿ ಕೆಲಸ ಬೇಕಾದರೆ ಗ್ರಾಮ ಪಂಚಾಯತಿ ಗೆ ನಮೋನೆ 6 ನ್ನು ಸಲ್ಲಿಸಲು ತಿಳಿಸಿದರು.**



# ಗದಗ ಜಿಪಂ, ತಾಪಂ ಮೀಸಲಾತಿ ಪಟ್ಟಿ ಬಿಡುಗಡೆ

ಗದಗ ಜಿಲ್ಲಾ ಪಂಚಾಯತ್ ಚುನಾವಣೆಗೆ ಸಂಬಂಧಿಸಿದಂತೆ ವಿವಿಧ ಪ್ರಾಂತೀಯ ಚುನಾವಣಾ ಕ್ಷೇತ್ರಗಳ ವರ್ಗವಾರು ಮೀಸಲಾತಿಪಟ್ಟಿಯನ್ನುಹೊರಡಿಸಲಾಗಿದೆ. ಒಟ್ಟು 25 ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮಹಿಳೆಯರು, ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿಯನ್ನು ಹಂಚಿಕೆ ಮಾಡಲಾಗಿದೆ.

**ಕ್ಷೇತ್ರವಾರು ಮೀಸಲಾತಿಯ ವಿವರ:**
ಹೊಂಬಳ: ಪರಿಶಿಷ್ಟ ಪಂಗಡ (ಮಹಿಳೆ)
ಹುಲಕೋಟಿ: ಸಾಮಾನ್ಯ
ಕುರ್ತಕೋಟಿ: ಸಾಮಾನ್ಯ
ಸೋರಟೂರ: ಹಿಂದುಳಿದ ವರ್ಗ 'ಅ'
ಲಕ್ಕುಂಡಿ: ಸಾಮಾನ್ಯ
ಕೋಟುಮಚಗಿ: ಹಿಂದುಳಿದ ವರ್ಗ 'ಅ'
ಯಳವತ್ತಿ: ಪರಿಶಿಷ್ಟ ಜಾತಿ
ಶಿಗ್ಲಿ : ಸಾಮಾನ್ಯ (ಮಹಿಳೆ)
ಸೂರಣಗಿ: ಪರಿಶಿಷ್ಟ ಜಾತಿ (ಮಹಿಳೆ)
ಮಾಗಡಿ: ಪರಿಶಿಷ್ಟ ಜಾತಿ (ಮಹಿಳೆ)
ಬೆಳ್ಳಟ್ಟಿ: ಪರಿಶಿಷ್ಟ ಪಂಗಡ
ಹೆಬ್ಬಾಳ: ಸಾಮಾನ್ಯ (ಮಹಿಳೆ)
ಡಂಬಳ: ಪರಿಶಿಷ್ಟ ಜಾತಿ (ಮಹಿಳೆ)
ಹಿರೇವಡ್ಡಟ್ಟಿ: ಹಿಂದುಳಿದ ವರ್ಗ 'ಅ' (ಮಹಿಳೆ)
ಕಲಕೇರಿ: ಪರಿಶಿಷ್ಟ ಜಾತಿ
ಹಮ್ಮಿಗಿ: ಸಾಮಾನ್ಯ
ಸೂಡಿ: ಸಾಮಾನ್ಯ (ಮಹಿಳೆ)
ರಾಜೂರ:ಹಿಂದುಳಿದವರ್ಗ'ಬ'(ಮಹಿಳೆ)
ನಿಡಗುಂದಿ: ಸಾಮಾನ್ಯ
ಹೊಳೆ ಆಲೂರ: ಸಾಮಾನ್ಯ (ಮಹಿಳೆ)
ಬೆಳವಣಿಕಿ: ಹಿಂದುಳಿದ ವರ್ಗ 'ಅ' (ಮಹಿಳೆ)
ಹಿರೇಹಾಳ: ಸಾಮಾನ್ಯ (ಮಹಿಳೆ)
ಅಬ್ಬಿಗೇರಿ: ಸಾಮಾನ್ಯ
ಚಿಕ್ಕನರಗುಂದ: ಸಾಮಾನ್ಯ
ಕೊಣ್ಣೂರ: ಸಾಮಾನ್ಯ (ಮಹಿಳೆ)

ಈ ಮೀಸಲಾತಿ ಪಟ್ಟಿಯು ಪ್ರಕಟಗೊಂಡ ಬೆನ್ನಲ್ಲೇಸ್ಥಳೀಯರಾಜಕೀಯವಲಯದಲ್ಲಿ ಚಟುವಟಿಕೆಗಳು ಕಾವೇರಿದ್ದು, ಚುನಾವಣೆಗೆ ಸ್ಪರ್ಧಿಸಲು ಬಯಸಿದ್ದ ಆಕಾಂಕ್ಷಿಗಳು ತಮ್ಮ ಕ್ಷೇತ್ರಗಳ ಮೀಸಲಾತಿಗೆ ಅನುಗುಣವಾಗಿ ತಂತ್ರಗಾರಿಕೆ ರೂಪಿಸಲು ಮುಂದಾಗಿದ್ದಾರೆ.

**ಗದಗ ಜಿಲ್ಲಾ ತಾಲೂಕು ಪಂಚಾಯತ್ ಚುನಾವಣೆ: ಪ್ರಾಂತೀಯ ಕ್ಷೇತ್ರಗಳ ಮೀಸಲಾತಿ ಪಟ್ಟಿ ಪ್ರಕಟ :** ಕರ್ನಾಟಕ ರಾಜ್ಯ ಪಂಚಾಯತ್ ರಾಜ್ ನಿರ್ದೇಶನಾಲಯವು ಗದಗ ಜಿಲ್ಲೆಯ ವಿವಿಧ ತಾಲೂಕು ಪಂಚಾಯತಿಗಳ ಪ್ರಾಂತೀಯ ಚುನಾವಣಾ ಕ್ಷೇತ್ರಗಳ ಮೀಸಲಾತಿ ಪಟ್ಟಿಯನ್ನು ಪ್ರಕಟಿಸಿದೆ. ತಾಲೂಕುವಾರು ಕ್ಷೇತ್ರಗಳ ಮೀಸಲಾತಿ ವಿವರ ಹೀಗಿದೆ:

**1. ಗದಗ ತಾಲೂಕು ಪಂಚಾಯಿತಿ**
ಹೊಂಬಳ – ಸಾಮಾನ್ಯ (ಮಹಿಳೆ)
ಬಳಾಗನೂರ– ಹಿಂದುಳಿದ "ಬ" ವರ್ಗ (ಮಹಿಳೆ)
ಚಿಕ್ಕಹಂದಿಗೋಳ –ಪರಿಶಿಷ್ಟ ಪಂಗಡ (ಮಹಿಳೆ)
ಹುಲಕೋಟಿ – ಹಿಂದುಳಿದ "ಅ" ವರ್ಗ
ಬಿಂಕದಕಟ್ಟಿ – ಸಾಮಾನ್ಯ (ಮಹಿಳೆ)
ಕಳಸಾಪುರ –ಪರಿಶಿಷ್ಟ ಜಾತಿ
ಕುರ್ತಕೋಟಿ –ಸಾಮಾನ್ಯ (ಮಹಿಳೆ)
ಅಂತೂರ ಬೆಂತೂರ –ಸಾಮಾನ್ಯ
ಚಿಂಚಲಿ – ಸಾಮಾನ್ಯ
ಹರ್ತಿ – ಸಾಮಾನ್ಯ
ಸೊರಟೂರ –ಸಾಮಾನ್ಯ
ಯಲಿಶಿರೂರ – ಸಾಮಾನ್ಯ
ನಾಗಾವಿ – ಪರಿಶಿಷ್ಟ ಜಾತಿ (ಮಹಿಳೆ)
ಲಕ್ಕುಂಡಿ – ಹಿಂದುಳಿದ "ಅ" ವರ್ಗ (ಮಹಿಳೆ)
ಅಡವಿಸೋಮಾಪುರ – ಪರಿಶಿಷ್ಟ ಜಾತಿ (ಮಹಿಳೆ)
ಕೋಟುಮಚಗಿ – ಹಿಂದುಳಿದ "ಅ" ವರ್ಗ
ಹುಯಿಲಗೋಳ – ಹಿಂದುಳಿದ "ಅ" ವರ್ಗ (ಮಹಿಳೆ)
ಹರ್ಲಾಪುರ – ಸಾಮಾನ್ಯ

2. ಲಕ್ಷ್ಮೇಶ್ವರ ತಾಲೂಕು ಪಂಚಾಯಿತಿ
ಯಳವತ್ತಿ –ಸಾಮಾನ್ಯ (ಮಹಿಳೆ)
ಗೋಜನೂರ –ಪರಿಶಿಷ್ಟ ಜಾತಿ
ಪುಟ್ಟಗಾಂವ ಬಡ್ನಿ – ಸಾಮಾನ್ಯ (ಮಹಿಳೆ)
ಶಿಗ್ಲಿ – ಹಿಂದುಳಿದ ವರ್ಗ "ಅ" (ಮಹಿಳೆ)
ರಾಮಗೇರಿ – ಪರಿಶಿಷ್ಟ ಪಂಗಡ (ಮಹಿಳೆ)
ದೊಡ್ಡೂರ – ಸಾಮಾನ್ಯ
ಸೂರಣಗಿ –ಸಾಮಾನ್ಯ
ಆದರಹಳ್ಳಿ – ಪರಿಶಿಷ್ಟ ಜಾತಿ (ಮಹಿಳೆ)
ಬಾಳೆಹೊಸೂರ – ಸಾಮಾನ್ಯ

**3. ಶಿರಹಟ್ಟಿ ತಾಲೂಕು ಪಂಚಾಯಿತಿ**
ಮಾಗಡಿ – ಸಾಮಾನ್ಯ
ಕಡಕೋಳ – ಪರಿಶಿಷ್ಟ ಜಾತಿ
ರಣತೂರ – ಪರಿಶಿಷ್ಟ ಜಾತಿ (ಮಹಿಳೆ)
ಬೆಳ್ಳಟ್ಟಿ –ಸಾಮಾನ್ಯ (ಮಹಿಳೆ)
ಕೊಂಚಿಗೇರಿ– ಸಾಮಾನ್ಯ
ಬನ್ನಿಕೊಪ್ಪ – ಪರಿಶಿಷ್ಟ ಪಂಗಡ (ಮಹಿಳೆ)
ಹೆಬ್ಬಾಳ–ಹಿಂದುಳಿದ"ಅ"ವರ್ಗ(ಮಹಿಳೆ)
ಸೇವಾನಗರ – ಸಾಮಾನ್ಯ
ಕೋಗನೂರ – ಸಾಮಾನ್ಯ (ಮಹಿಳೆ)

**4. ರೋಣ ತಾಲೂಕು ಪಂಚಾಯಿತಿ**
ಹೊಳೆ ಆಲೂರ –ಹಿಂದುಳಿದ "ಅ" ವರ್ಗ
ಹುನಗುಂಡಿ – ಸಾಮಾನ್ಯ
ಮೇಣಸಗಿ– ಹಿಂದುಳಿದ "ಅ" ವರ್ಗ (ಮಹಿಳೆ)
ಬೆಳವಣಕಿ – ಹಿಂದುಳಿದ "ಬ" ವರ್ಗ
ಯಾವಗಲ್ಲ – ಸಾಮಾನ್ಯ
ಹುಲ್ಲೂರು –ಸಾಮಾನ್ಯ (ಮಹಿಳೆ)
ಸವಡಿ – ಪರಿಶಿಷ್ಟ ಜಾತಿ (ಮಹಿಳೆ)
ಕೊತಬಾಳ – ಪರಿಶಿಷ್ಟ ಪಂಗಡ (ಮಹಿಳೆ)
ಹಿರೇಹಾಳ – ಹಿಂದುಳಿದ "ಅ" ವರ್ಗ (ಮಹಿಳೆ)
ಅಬ್ಬಿಗೇರಿ –ಸಾಮಾನ್ಯ
ಡ.ಸ.ಹಡಗಲಿ –ಸಾಮಾನ್ಯ
ಜಕ್ಕಲಿ – ಸಾಮಾನ್ಯ (ಮಹಿಳೆ)

5. ಗಜೇಂದ್ರಗಡ ತಾಲೂಕು ಪಂಚಾಯಿತಿ
ಸೂಡಿ – ಸಾಮಾನ್ಯ (ಮಹಿಳೆ)
ಇಟಗಿ – ಸಾಮಾನ್ಯ
ಶಾಂತಗೇರಿ – ಪರಿಶಿಷ್ಟ ಪಂಗಡ (ಮಹಿಳೆ)
ಮುಷ್ಟಿಗೇರಿ – ಸಾಮಾನ್ಯ
ರಾಜೂರ – ಪರಿಶಿಷ್ಟ ಜಾತಿ
ಲಕ್ಕಲಕಟ್ಟಿ – ಸಾಮಾನ್ಯ
ಗೋಗೇರಿ – ಪರಿಶಿಷ್ಟ ಜಾತಿ (ಮಹಿಳೆ)
ನಿಡಗುಂದಿ – ಹಿಂದುಳಿದ ವರ್ಗ "ಅ" (ಮಹಿಳೆ)
ಹಾಳಕೇರಿ – ಸಾಮಾನ್ಯ (ಮಹಿಳೆ)

6. ನರಗುಂದ ತಾಲೂಕು ಪಂಚಾಯಿತಿ
ಚಿಕ್ಕನರಗುಂದ – ಸಾಮಾನ್ಯ
ಹಿರೇಕೊಪ್ಪ –ಸಾಮಾನ್ಯ
ಕಣಕಿಕೊಪ್ಪ –ಪರಿಶಿಷ್ಟ ಪಂಗಡ (ಮಹಿಳೆ)
ಹುನಶೀಕಟ್ಟಿ – ಹಿಂದುಳಿದ "ಅ" ವರ್ಗ
ಸುರಕೋಡ – ಸಾಮಾನ್ಯ (ಮಹಿಳೆ)
ಕೊಣ್ಣೂರ – ಹಿಂದುಳಿದ "ಅ" ವರ್ಗ (ಮಹಿಳೆ)
ಹದಲಿ – ಸಾಮಾನ್ಯ (ಮಹಿಳೆ)
ಶಿರೋಳ – ಪರಿಶಿಷ್ಟ ಜಾತಿ (ಮಹಿಳೆ)
ವಾಸನ – ಸಾಮಾನ್ಯ

**7. ಮುಂಡರಗಿ ತಾಲೂಕು ಪಂಚಾಯಿತಿ**
ಡಂಬಳ – ಸಾಮಾನ್ಯ (ಮಹಿಳೆ)
ಡೋಣಿ – ಪರಿಶಿಷ್ಟ ಜಾತಿ (ಮಹಿಳೆ)
ಕದಂಪುರ – ಪರಿಶಿಷ್ಟ ಜಾತಿ
ಹಿರೇವಡ್ಡಟ್ಟಿ – ಸಾಮಾನ್ಯ
ಮೇವಂಡಿ – ಸಾಮಾನ್ಯ
ಆಲೂರ – ಹಿಂದುಳಿದ ವರ್ಗ "ಅ" (ಮಹಿಳೆ)
ಕಲಕೇರಿ – ಪರಿಶಿಷ್ಟ ಜಾತಿ (ಮಹಿಳೆ)
ಹಾರೋಗೇರಿ–ಪರಿಶಿಷ್ಟಪಂಗಡ(ಮಹಿಳೆ)
ಕೋರಲಹಳ್ಳಿ – ಸಾಮಾನ್ಯ
ಹಮ್ಮಿಗಿ – ಸಾಮಾನ್ಯ (ಮಹಿಳೆ)
ಬಾಗೇವಾಡಿ – ಸಾಮಾನ್ಯ

ಈ ಆದೇಶವನ್ನು ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ ಕೃಷ್ಣಮೂರ್ತಿ ಕೆ.ಹೆಚ್. (ನಿರ್ದೇಶಕರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ) ಅವರು ಹೊರಡಿಸಿದ್ದಾರೆ.

# ದೇವಲ ಗಾಣಗಾಪುರ ಜಿ.ಪಂ.ಕ್ಷೇತ್ರದಲ್ಲಿ ಟಿಕೆಟ್ ಪೈಪೋಟಿ!

**। ಕಾಂಗ್ರೆಸ್‌ನಲ್ಲಿ ಮಾರುತಿ ಮೂರನತ್ತಿ, ಪ್ರಿಯಾಂಕಾ ಪೂಜಾರಿ ಹೆಸರು ಚರ್ಚೆ;**
**। ಬಿಜೆಪಿ–ಜೆಡಿಎಸ್ ದೋಸ್ತಿಯಲ್ಲಿ ದಿಗಂಬರ ಕರಜರಗಿ, ಯಲ್ಲಪ್ಪ ರಮಗಾ ಆಕಾಂಕ್ಷಿಗಳು**

**ಸತ್ಯಮಿಥ್ಯ ಸುದ್ದಿಮೂಲ ಅಫಜಲಪುರ:**
ಮುಂಬರುವ ಜಿಲ್ಲಾ ಪಂಚಾಯತ್ ಚುನಾವಣೆಯ ಹಿನ್ನೆಲೆಯಲ್ಲಿ ಅಫಜಲಪುರ ತಾಲೂಕಿನ ದೇವಲ ಗಾಣಗಾಪುರ ಜಿಲ್ಲಾ ಪಂಚಾಯತ್ ಮತಕ್ಷೇತ್ರದಲ್ಲಿ ರಾಜಕೀಯ ಚಟುವಟಿಕೆಗಳು ಗರಿಗೆದರಿವೆ. ಕಾಂಗ್ರೆಸ್ ಹಾಗೂ ಬಿಜೆಪಿ□ಜೆಡಿಎಸ್ ದೋಸ್ತಿ ವತಿಯಿಂದ ಸ್ಪರ್ಧಿಸಲು ಆಕಾಂಕ್ಷಿಗಳು ಆಸಕ್ತಿ ತೋರುತ್ತಿದ್ದು, ಟಿಕೆಟ್ ಯಾರಿಗೆ ಒಲಿಯಲಿದೆ ಎಂಬ ಕುತೂಹಲ ಸ್ಥಳೀಯ ರಾಜಕೀಯ ವಲಯದಲ್ಲಿ ಮೂಡಿದೆ.

ದೇವಲ ಗಾಣಗಾಪುರ ಧಾರ್ಮಿಕ ಕ್ಷೇತ್ರವಾಗಿರುವುದರ ಜೊತೆಗೆ ಸುತ್ತಮುತ್ತಲಿನ ಗ್ರಾಮಗಳ ರಾಜಕೀಯ ಚಟುವಟಿಕೆಗಳಿಗೂ ಪ್ರಮುಖ ಕೇಂದ್ರವಾಗಿದೆ. ಹೀಗಾಗಿ ಕ್ಷೇತ್ರದಲ್ಲಿ ಪಕ್ಷದ ಸಂಘಟನೆ, ಸ್ಥಳೀಯ ಜನಸಂಪರ್ಕ, ಸಮಾಜಮುಖಿ ಚಟುವಟಿಕೆಗಳು ಹಾಗೂ ಹಿರಿಯ ನಾಯಕರೊಂದಿಗಿನ ಸಂಪರ್ಕಗಳು ಟಿಕೆಟ್ ಹಂಚಿಕೆಯ ಚರ್ಚೆಯಲ್ಲಿ ಮಹತ್ವ ಪಡೆಯುವ ಸಾಧ್ಯತೆಯಿದೆ.






**ಕಾಂಗ್ರೆಸ್‌ನಲ್ಲಿ ಮಾರುತಿ ಮೂರನತ್ತಿ, ಪ್ರಿಯಾಂಕಭಟ್ ಪೂಜಾರಿ ಹೆಸರು ಚರ್ಚೆ:** ಕಾಂಗ್ರೆಸ್ ಪಕ್ಷದ ವತಿಯಿಂದ ಮಾರುತಿ ಮೂರನತ್ತಿ ಹಾಗೂ ಪ್ರಿಯಾಂಕ ಭಟ್ ನಾಗೇಶ್ ಭಟ್ ಪೂಜಾರಿ ಅವರ ಹೆಸರುಗಳು ಪ್ರಮುಖ ಆಕಾಂಕ್ಷಿಗಳಾಗಿ ಕೇಳಿಬರುತ್ತಿವೆ.

**ಮಾರುತಿ ಮೂರನತ್ತಿ:** ಕೋಳಿ ಸಮಾಜದ ಹಿರಿಯ ಮುಖಂಡರಾಗಿ ಗುರುತಿಸಿಕೊಂಡಿರುವ. ಹಾಲಿ ಶಾಸಕ ಎಂ.ವೈ. ಪಾಟೀಲ್ ಅವರೊಂದಿಗಿನ ರಾಜಕೀಯ ಸಂಪರ್ಕವೂ ಅವರ ಪರಿಚಯದ ಪ್ರಮುಖ ಅಂಶವಾಗಿದೆ. ಸದ್ಯ ಅಫಜಲಪುರ––ದೇವಲ ಗಾಣಗಾಪುರ ನಗರ ಯೋಜನಾ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿರುವ ಅವರು, ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸುವ ಆಕಾಂಕ್ಷೆ ಹೊಂದಿದ್ದಾರೆ ಎಂದು ಸ್ಥಳೀಯ ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆ.

**ಪ್ರಿಯಾಂಕಭಟ್ ನಾಗೇಶ್ ಭಟ್ ಪೂಜಾರಿ:** ಧಾರ್ಮಿಕ ಹಾಗೂ ಸಹಕಾರ ಕ್ಷೇತ್ರದ ಹಿನ್ನೆಲೆಯುಳ್ಳ ಪ್ರಿಯಾಂಕಾ ನಾಗೇಶ್ ಭಟ್ ಪೂಜಾರಿ ಅವರ ಹೆಸರೂ ಕಾಂಗ್ರೆಸ್ ಆಕಾಂಕ್ಷಿಗಳ ಸಾಲಿನಲ್ಲಿ ಕೇಳಿಬರುತ್ತಿದೆ. ಅವರ ಕುಟುಂಬವು ದೇವಲ ಗಾಣಗಾಪುರದ ಧಾರ್ಮಿಕ ಪರಂಪರೆಯೊಂದಿಗೆ ಗುರುತಿಸಿಕೊಂಡಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷೆಯಾಗಿ ಕಾರ್ಯನಿರ್ವಹಿಸಿರುವ ಅನುಭವ ಹಾಗೂ ಸಹಕಾರ ಕ್ಷೇತ್ರದ ಸಂಪರ್ಕ ಅವರ ಪರಿಚಯದ ಪ್ರಮುಖ ಅಂಶಗಳಾಗಿವೆ. ಮಾಜಿ ಸಚಿವ ಮಾಲಿಕಯ್ಯ ಗುತ್ತೇದಾರ್ ಅವರೊಂದಿಗಿನ ರಾಜಕೀಯ ಒಡನಾಟದ ಬಗ್ಗೆಯೂ ಚರ್ಚೆಗಳಿವೆ.

ಕಾಂಗ್ರೆಸ್‌ನಲ್ಲಿ ಈ ಇಬ್ಬರ ಹೆಸರುಗಳು ಕೇಳಿಬರುತ್ತಿರುವುದರಿಂದ ಟಿಕೆಟ್ ಹಂಚಿಕೆ ಕುರಿತು ಕುತೂಹಲ ಹೆಚ್ಚಾಗಿದೆ. ಆದರೆ ಪಕ್ಷದ ಅಧಿಕೃತ ನಿರ್ಧಾರ ಪ್ರಕಟವಾಗುವವರೆಗೆ ಯಾರನ್ನೂ ಅಂತಿಮ ಅಭ್ಯರ್ಥಿ ಎಂದು ಪರಿಗಣಿಸಲು ಸಾಧ್ಯವಿಲ್ಲ.

**ಬಿಜೆಪಿ–ಜೆಡಿಎಸ್ ದೋಸ್ತಿಯಲ್ಲಿ ದಿಗಂಬರ ಕರಜರಗಿ, ಯಲ್ಲಪ್ಪ ರಮಗಾ ಹೆಸರು ಚರ್ಚೆ**
ಬಿಜೆಪಿ–ಜೆಡಿಎಸ್ ದೋಸ್ತಿ ವತಿಯಿಂದ ದೇವಲ ಗಾಣಗಾಪುರ ಜಿಲ್ಲಾ ಪಂಚಾಯತ್ ಮತಕ್ಷೇತ್ರದಲ್ಲಿ ದಿಗಂಬರ ಕರಜರಗಿ ಹಾಗೂ ಯಲ್ಲಪ್ಪ ರಮಗಾ ಅವರ ಹೆಸರುಗಳು ಆಕಾಂಕ್ಷಿಗಳಾಗಿ ಕೇಳಿಬರುತ್ತಿವೆ.

**ದಿಗಂಬರ ಕರಜರಗಿ:** ಕೋಳಿ ಸಮಾಜದ ಯುವ ಮುಖಂಡರಾಗಿ ಗುರುತಿಸಿಕೊಂಡಿರುವ ದಿಗಂಬರ ಕರಜರಗಿ ಅವರು ಬಿಜೆಪಿ ನಾಯಕ ನಿತಿನ್ ಗುತ್ತೇದಾರ್ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದಾರೆ ಎಂಬ ಸ್ಥಳೀಯ ರಾಜಕೀಯ ಪರಿಚಯ ಹೊಂದಿದ್ದಾರೆ. ವಿವಿಧ ಸಮಾಜಗಳ ಮುಖಂಡರೊಂದಿಗಿನ ಸಂಪರ್ಕ ಹಾಗೂ ಪಕ್ಷದ ಸಂಘಟನೆಯಲ್ಲಿ ಅವರ ಪಾತ್ರ ಮುಂದಿನ ದಿನಗಳಲ್ಲಿ ಚರ್ಚೆಯ ವಿಷಯವಾಗಬಹುದು. ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸುವ ಆಕಾಂಕ್ಷಿಯಾಗಿ ಅವರ ಹೆಸರೂ ರಾಜಕೀಯ ವಲಯದಲ್ಲಿ ಕೇಳಿಬರುತ್ತಿದೆ.

ಯಲ್ಲಪ್ಪ ರಮಗಾ: ಬಿಜೆಪಿ–ಜೆಡಿಎಸ್ ದೋಸ್ತಿಯ ಪ್ರಬಲ ಆಕಾಂಕ್ಷಿಯಾಗಿ ಯಲ್ಲಪ್ಪ ರಮಗಾ ಅವರ ಹೆಸರು ಚರ್ಚೆಯಲ್ಲಿದೆ. ಹೋರಾಟಗಾರ ಶಿವಕುಮಾರ್ ನಾಟಿ–ಕರ್ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಇವರು, ದೇವಲ ಗಾಣಗಾಪುರದ ಕೋಳಿ ಸಮಾಜದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಮಾಜದ ಸಂಘಟನೆಯಲ್ಲಿ ತೊಡಗಿಸಿಕೊಂಡಿರುವ ಯಲ್ಲಪ್ಪ ರಮಗಾ ಅವರು ಮುಂಬರುವ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸುವ ಆಕಾಂಕ್ಷೆ ಹೊಂದಿದ್ದಾರೆ. ಹೀಗಾಗಿ ದೋಸ್ತಿ ಪಕ್ಷಗಳ ಟಿಕೆಟ್ ಹಂಚಿಕೆಯ ಚರ್ಚೆಯಲ್ಲಿ ಇವರ ಹೆಸರೂ ಗಮನ ಸೆಳೆಯುತ್ತಿದೆ. ಬಿಜೆಪಿ–ಜೆಡಿಎಸ್ ದೋಸ್ತಿಯಲ್ಲಿ ಇಬ್ಬರ ಹೆಸರುಗಳು ಕೇಳಿಬರುತ್ತಿರುವುದರಿಂದ ಅಂತಿಮವಾಗಿ ಯಾರಿಗೆ ಟಿಕೆಟ್ ದೊರೆಯಲಿದೆ ಎಂಬ ಕುತೂಹಲ ಮೂಡಿದೆ. ಆದರೆ ಅಧಿಕೃತ ಅಭ್ಯರ್ಥಿ ಘೋಷಣೆಯಾಗುವವರೆಗೆ ಯಾರನ್ನೂ ಅಂತಿಮ ಅಭ್ಯರ್ಥಿ ಎಂದು ಹೇಳಲು ಸಾಧ್ಯವಿಲ್ಲ.

**ಟಿಕೆಟ್ ಹಂಚಿಕೆಯಲ್ಲಿ ಯಾವ ಅಂಶಗಳು ಮುಖ್ಯವಾಗಬಹುದು?:** ದೇವಲ ಗಾಣಗಾಪುರ ಜಿಲ್ಲಾ ಪಂಚಾಯತ್ ಕ್ಷೇತ್ರದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ□ಜೆಡಿಎಸ್ ದೋಸ್ತಿ ಆಕಾಂಕ್ಷಿಗಳ ನಡುವೆ ಟಿಕೆಟ್ ನಿರೀಕ್ಷೆ ಸಹಜವಾಗಿಯೇ ಹೆಚ್ಚಾಗಿದೆ. ಸ್ಥಳೀಯ ಜನರೊಂದಿಗಿನ ಸಂಪರ್ಕ, ಪಕ್ಷದ ಸಂಘಟನೆಯಲ್ಲಿ ಸಲ್ಲಿಸಿರುವ ಸೇವೆ, ಸಾರ್ವಜನಿಕ ಸಮಸ್ಯೆಗಳಿಗೆ ಸ್ಪಂದನೆ, ವಿವಿಧ ಸಮುದಾಯಗಳೊಂದಿಗಿನ ಸಂಬಂಧ ಹಾಗೂ ಚುನಾವಣಾ ಕಾರ್ಯತಂತ್ರದಂತಹ ಅಂಶಗಳು ಪಕ್ಷಗಳ ಆಂತರಿಕ ಚರ್ಚೆಯಲ್ಲಿ ಮಹತ್ವ ಪಡೆಯಬಹುದು. ಆದರೆ ಯಾರಿಗೆ ಟಿಕೆಟ್ ಸಿಗಲಿದೆ ಎಂಬುದನ್ನು ಈಗಲೇ ನಿರ್ಧರಿಸಲು ಸಾಧ್ಯವಿಲ್ಲ. ಪಕ್ಷಗಳ ಅಧಿಕೃತ ಪ್ರಕಟಣೆ ಮತ್ತು ಚುನಾವಣಾ ಪ್ರಕ್ರಿಯೆ ಮುಂದುವರಿದಂತೆ ಸ್ಪಷ್ಟ ಚಿತ್ರಣ ದೊರೆಯಲಿದೆ.

**ಅಧಿಕೃತ ಟಿಕೆಟ್ ಘೋಷಣೆಯತ್ತ ಎಲ್ಲರ ಚಿತ್ತ:** ಒಟ್ಟಿನಲ್ಲಿ, ದೇವಲ ಗಾಣಗಾಪುರ ಜಿಲ್ಲಾ ಪಂಚಾಯತ್ ಮತಕ್ಷೇತ್ರದಲ್ಲಿ ಕಾಂಗ್ರೆಸ್‌ನ ಮಾರುತಿ ಮೂರನತ್ತಿ, ಪ್ರಿಯಾಂಕಾ ನಾಗೇಶ್ ಭಟ್ ಪೂಜಾರಿ ಹಾಗೂ ಬಿಜೆಪಿ–ಜೆಡಿಎಸ್ ದೋಸ್ತಿಯ ದಿಗಂಬರ ಕರಜರಗಿ, ಯಲ್ಲಪ್ಪ ರಮಗಾ ಅವರ ಹೆಸರುಗಳು ಆಕಾಂಕ್ಷಿಗಳಾಗಿ ಚರ್ಚೆಯಲ್ಲಿವೆ. ಮುಂದಿನ ದಿನಗಳಲ್ಲಿ ಪಕ್ಷಗಳ ಸಭೆಗಳು, ಮುಖಂಡರ ಚಟುವಟಿಕೆಗಳು ಹಾಗೂ ಅಧಿಕೃತ ಟಿಕೆಟ್ ಘೋಷಣೆಗಳು ಕ್ಷೇತ್ರದ ರಾಜಕೀಯ ಚಿತ್ರಣಕ್ಕೆ ಸ್ಪಷ್ಟತೆ ನೀಡಲಿವೆ.

# ಹಿರಿಯ ನಟ ನಾನಾ ಪಾಟೇಕರ್ ನಿಧನ: ಸಿದ್ದನಕೊಳ್ಳದ ಡಾ. ಶಿವಕುಮಾರ ಸ್ವಾಮೀಜಿ ಅವರಿಂದ ಶ್ರದ್ಧಾಂಜಲಿ

**ಸತ್ಯಮಿಥ್ಯ ಸುದ್ದಿಮೂಲ ಬಾಗಲಕೋಟೆ/ಸಿದ್ದನಕೊಳ್ಳ :** ಬಹುಭಾಷಾ ಅಭಿನಯ ಚತುರ ಹಾಗೂ ಹಿರಿಯ ನಟ ನಾನಾ ಪಾಟೇಕರ್ (75) ಅವರು ಗೋವಾದಲ್ಲಿ ನಿಧನರಾಗಿದ್ದು, ಅವರ ಅಗಲಿಕೆಗೆ ಬಾಗಲಕೋಟೆ ಜಿಲ್ಲೆ ಇಲಕಲ್ಲ ತಾಲೂಕಿನ ನಿರಂತರ ದಾಸೋಹ ಹಾಗೂ ಕಲಾಪೋಷಕರ ಮಠವಾದ ಸಿದ್ದನಕೊಳ್ಳದ ಧರ್ಮಾಧಿಕಾರಿ ಪರಮಪೂಜ್ಯ ಡಾ. ಶಿವಕುಮಾರ್ ಮಹಾಸ್ವಾಮಿಗಳು ತೀವ್ರ ಸಂತಾಪ ವ್ಯಕ್ತಪಡಿಸಿ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.



ನಾನಾ ಪಾಟೇಕರ್ ಅವರ ಅಗಲಿಕೆಯ ಕುರಿತು ಕಂಬನಿ ಮಿಡಿದ ಶ್ರೀಗಳು, "ನಾನಾ ಪಾಟೇಕರ್ ಅವರು ಅತ್ಯಂತ ಸರಳ, ಸಜ್ಜನ ಹಾಗೂ ಬಡವರ ಪರವಾಗಿ ಸದಾ ಮಿಡಿಯುವ ವಿಶಾಲ ಹೃದಯ ಹೊಂದಿದವರಾಗಿದ್ದರು. ಅವರ ನಿಧನವು ಚಿತ್ರರಂಗಕ್ಕೆ ಮತ್ತು ಸಮಾಜಕ್ಕೆ ತುಂಬಲಾರದ ನಷ್ಟ ತಂದೊಡ್ಡಿದ್ದು, ಅತ್ಯಂತ ದುಃಖಕರ ವಿಷಯವಾಗಿದೆ" ಎಂದು ಸ್ಮರಿಸಿದ್ದಾರೆ.

ಸಾಮಾಜಿಕ ಸೇವೆಯಲ್ಲೂ ಮುಂಚೂಣಿಯಲ್ಲಿದ್ದ ನಾನಾ ಪಾಟೇಕರ್ ಅವರು ಮಹಾರಾಷ್ಟ್ರದಲ್ಲಿ ಬರಗಾಲದಿಂದ ಸಂಕಷ್ಟಕ್ಕೊಳಗಾದ ರೈತರಿಗೆ ನೆರವಾಗಲು 2015ರಲ್ಲಿ 'ನಾಮ್ ಫೌಂಡೇಶನ್' ಸ್ಥಾಪಿಸಿ ನಿರಂತರ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಶ್ರೀಮಠದ ಬಾಂಧವ್ಯವನ್ನು ಸ್ಮರಿಸಿದ ಶ್ರೀಗಳು, "2027ರ ಜನವರಿ ತಿಂಗಳಿನಲ್ಲಿ ನಡೆಯಲಿರುವ 'ಸಿದ್ಧಶ್ರೀ ಉತ್ಸವ'ಕ್ಕೆ ಅತಿಥಿಗಳಾಗಿ ಭಾಗವಹಿಸಲು ಅವರು ನಮ್ಮ ಶ್ರೀಮಠಕ್ಕೆ ಆಗಮಿಸಬೇಕಿತ್ತು. ಈ ಕುರಿತು ಅವರನ್ನು ಕರೆತರುವುದಾಗಿ ತೆಲುಗಿನ ನಿರ್ದೇಶಕರೊಬ್ಬರು ಈಗಾಗಲೇ ತಿಳಿಸಿದ್ದರು" ಎಂದು ಪೂಜ್ಯರು ಹೇಳಿದ್ದಾರೆ.

ತಮ್ಮ ಅಭಿನಯದ ಮೂಲಕ ಪ್ರೇಕ್ಷಕರ ಮನಗೆದ್ದಿದ್ದ ನಾನಾ ಪಾಟೇಕರ್ ಅವರು 'ಗಿದ್', 'ಕ್ರಾಂತಿವೀರ', 'ನಟಸಮ್ರಾಟ್' (ಮರಾಠಿ), 'ವೆಲ್ಕಮ್', 'ಟಾಕ್ಸಿಕ್ 9211' ಸೇರಿದಂತೆ ಹಲವು ಹಿಂದಿ ಹಾಗೂ ಮರಾಠಿ ಚಿತ್ರಗಳಲ್ಲಿ ನಟಿಸಿದ್ದರು. ಅಲ್ಲದೆ, ಕನ್ನಡದ 'ಯಕ್ಷ' ಸಿನಿಮಾದಲ್ಲೂ ಅಭಿನಯಿಸಿ ಸೈ ಎನಿಸಿಕೊಂಡಿದ್ದರು.

ತಮ್ಮ ಅತ್ಯುತ್ತಮ ಅಭಿನಯಕ್ಕಾಗಿ 3 ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳು, 2013ರಲ್ಲಿ ಭಾರತ ಸರ್ಕಾರ ನೀಡುವ 'ಪದ್ಮಶ್ರೀ' ಪುರಸ್ಕಾರ, 'ರಾಜ್ ಕಪೂರ್ ವಿಶೇಷ ಕೊಡುಗೆ ಪ್ರಶಸ್ತಿ', 'ಕ್ರಾಂತಿವೀರ' ಚಿತ್ರಕ್ಕಾಗಿ ಅತ್ಯುತ್ತಮ ನಟ ಪ್ರಶಸ್ತಿ, 'ಪರಿಂಡಾ' ಮತ್ತು 'ಅಗ್ನಿಸಾಕ್ಷಿ' ಚಿತ್ರಗಳಿಗಾಗಿ ಅತ್ಯುತ್ತಮ ಪೋಷಕ ನಟ ಪ್ರಶಸ್ತಿ, 'ನಟಸಮ್ರಾಟ್' ಚಿತ್ರಕ್ಕೆ ಅತ್ಯುತ್ತಮ ನಟ ಪ್ರಶಸ್ತಿ ಹಾಗೂ 'ಕಾಲಾ' ಚಿತ್ರಕ್ಕಾಗಿ ಅತ್ಯುತ್ತಮ ಖಳನಾಯಕ ಪ್ರಶಸ್ತಿಗಳನ್ನು ಪಡೆದು ಭಾಜನರಾಗಿದ್ದರು.

**ವಿವಿಧ ಗಣ್ಯರ ಸಂತಾಪ:** ನಾನಾ ಪಾಟೇಕರ್ ಅವರ ನಿಧನಕ್ಕೆ ಸಿದ್ಧಶ್ರೀ ಚಲನಚಿತ್ರೋತ್ಸವ ಆಯ್ಕೆ ಸಮಿತಿಯ ಪ್ರಮುಖರಾದ ಡಾ. ಪ್ರಭು ಗಂಜಿಹಾಳ, ಡಾ. ವೀರೇಶ ಹಂಡಿಗಿ, ಅರವಿಂದ ಮುಳಗುಂದ, ಸಂಗನಗೌಡ ರುದ್ರಗೌಡ್ರ (ಕುರುಡಗಿ), ವೀರೇಶ ಪುರವಂತ, ಶರಣು ಸುಗ್ನಳ್ಳಿ, ಲೋಕೇಶ ವಿದ್ಯಾಧರ, ಸುನಂದಾ ಕಲ್ಬುರ್ಗಿ ಹಾಗೂ ಕೃತ್ತಿಕಾ ಅವರು ಆಳವಾದ ಕಂಬನಿ ಮಿಡಿದಿದ್ದಾರೆ.

# ತುಂಗಾ ಮೇಲ್ದಂಡೆ ಕಾಲುವೆ ನೀರು ಬಳಸದಂತೆ ಸೂಚನೆ

**ಹಾವೇರಿ:** ತುಂಗಾ ಮೇಲ್ದಂಡೆ ಯೋಜನೆಯ ಕಾಲುವೆಯಲ್ಲಿ ಕಲುಷಿತ ನೀರು ಮಿಶ್ರಣಗೊಂಡಿದ್ದು, ಕಲುಶಿತ ನೀರು ಈಗಾಗಲೇ ರಟ್ಟಿಹಳ್ಳಿ ವ್ಯಾಪ್ತಿದಾಟಿ ರಾಣೇಬೆನ್ನೂರು ವ್ಯಾಪ್ತಿಯಲ್ಲಿ ಹರಿಯುತ್ತಿದೆ. ಆದ್ದರಿಂದ ತುಂಗಾ ಮೇಲ್ದಂಡೆ ಯೋಜನೆ ಕಾಲುವೆ ಜಾಲಗಳಲ್ಲಿ ಬರುವ ಎಲ್ಲಾ ಗ್ರಾಮಗಳ ಗ್ರಾಮಸ್ಥರು ಜನ–ಜಾನುವಾರುಗಳಿಗೆ ಈ ಕಲುಷಿತ ನೀರನ್ನು ಬಳಸಬಾರದು ಎಂದು ಕ.ನೀ.ನಿ.ನಿ. ತುಂಗಾ ಮೇಲ್ದಂಡೆ ಯೋಜನೆ ರಾಣೇಬೆನ್ನುರು ವಿಭಾಗದ ಕಾರ್ಯಪಾಲಕ ಇಂಜಿನಿಯರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

